ಸಂಪುಟ 01 | ಸಂಚಿಕೆ 32 | ಶನಿವಾರ 13 ಡಿಸೆಂಬರ್ 2025 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

REGIONAL KANNADA DAILY MORNING

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

### ನ್ಯಾಷನಲ್ ಹಾರ್ಸ್ ಡೇ

ಕುದುರೆಗಳ ಗೌರವ :ಕುದುರೆಗಳ ಮಹತ್ವ, ಸೇವೆ ಮತ್ತು ಮಾನವ ಜೀವನದಲ್ಲಿ ಕೊಡುಗೆ ಬಗ್ಗೆ ಜಾಗೃತಿ ಮೂಡಿಸುವುದು. ಕುದುರೆಗಳು ಕೃಷಿ, ಸಾರಿಗೆ, ಕ್ರೀಡೆ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿ ನೀಡಿದ ಸೇವೆಯನ್ನು ಸ್ಮರಿಸುವುದು.ಕುದುರೆಗಳ ಆರೈಕೆ:ಆರೋಗ್ಯ, ಆಹಾರ, ನೈಸರ್ಗಿಕ ಪರಿಸರದಲ್ಲಿ ಆರೈಕೆ, ವ್ಯಾಯಾಮ ಮತ್ತು ಪ್ರಜಾತಿ ಸಂರಕ್ಷಣೆ ಕುರಿತ ಜಾಗೃತಿ.ಶಿಕ್ಷಣ ಮತ್ತು ಕ್ರೀಡೆ:ರೈಡಿಂಗ್, ಹಾರ್ಸ್ ಶೋ, ಜಂಬಿ ಸ್ಪರ್ಧೆ, ಹಾರ್ಸ್ ಕ್ರೀಡೆಗಳಿಗೆ ಉತ್ತೇಜನ ನೀಡುವ ದಿನ.

## ಸುಭಾಷಿತ

ಮನಸ್ಸನ್ನು ಚಂಚಲಗೊಳಿಸುವ ವಸ್ತು
ಎದುರಿರುವಾಗಲೂ ಯಾರ ಮನಸ್ಸು
ವಿಕಾರವಾಗುವುದಿಲ್ಲವೋ ಅವರೇ
ಲೋಕದಲ್ಲಿ ಧೀರರು

ಕಾಳಿದಾಸ

# ಎಸ್‌ಸಿ/ಎಸ್‌ಟಿ ಅನುದಾನ ದುರ್ಬಳಕೆ ಆರೋಪ ಕುರಿತು ವಿಧಾನ ಪರಿಷತ್‌ನಲ್ಲಿ ವಾಕ್ಸಮರ



ಬೆಳಗಾವಿ: ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಿಟ್ಟ 50 ಸಾವಿರ ಕೋಟಿ ಅನುದಾನ ದುರುಪಯೋಗವಾಗಿದೆ ಎಂದು ಆಡಳಿತ ಪಕ್ಷದ ಸದಸ್ಯರು ಸರ್ಕಾರದ ವಿರುದ್ಧ ಗಂಭೀರ ಆರೋಪ ಮಾಡಿದ ಪ್ರಸಂಗ ವಿಧಾನಪರಿಷತ್‌ನಲ್ಲಿ ನಡೆಯಿತು. ಇದನ್ನೇ ಅಸ್ತ್ರವನ್ನಾಗಿಟ್ಟುಕೊಂಡು ಪ್ರತಿಪಕ್ಷ ಬಿಜೆಪಿ ಸದಸ್ಯರು ಈ ಪ್ರಕರಣವನ್ನು ಎಸ್‌ಐಟಿ ರಚನೆ ಮಾಡಿ ತನಿಖೆಗೆ ಆದ–ೇಶ ನೀಡಬೇಕೆಂದು ಆಗ್ರಹಿಸಿದರು.

ಈ ಹಂತದಲ್ಲಿ ಆಡಳಿತ ಮತ್ತು ಪ್ರತಿಪಕ್ಷದ ಸದಸ್ಯರ ನಡುವೆ ಭಾರೀ ಮಾತಿನ ಚಕಮಕಿ ನಡೆದು ಸದನದಲ್ಲಿ ಒಂದು ಕ್ಷಣ ಕಾವೇರಿದ ವಾಕ್ಸಮರವೂ ನಡೆಯಿತು.ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ಎನ್.ಎಚ್. ಜಕ್ಕಪ್ಪನವರ್, ಗ್ರಾಮ ಪಂಚಾಯಿತಿಗಳಲ್ಲಿ ಎಸ್‌ಸಿ, ಎಸ್‌ಟಿ ವರ್ಗಗಳಿಗೆ ಮೀಸಲಿಟ್ಟ ಅನುದಾನದ ಮೊತ್ತ ಗ್ರಾಮಸಭೆ ಸೇರಿದಂತೆ ಇತರ ವಿಷಯಗಳ ಬಗ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆಯವರನ್ನು ಪ್ರಶ್ನೆ ಮಾಡಿದರು. ಸಚಿವರ ಪರವಾಗಿ ಕಾರ್ಮಿಕ ಸಚಿವ ಸಂತೋಷ್ ಲಾಡ್ ಉತ್ತರಿಸುವ ಮೊದಲೇ ಸುದೀರ್ಘವಾಗಿ ಮಾತನಾಡಿದ ಜಕ್ಕಪ್ಪನವರ್, ಗ್ರಾಮ ಪಂಚಾಯಿತಿಗಳಲ್ಲಿ ಎಸ್‌ಸಿ/ಎಸ್‌ಟಿ ಸಮುದಾಯದ ಕಲ್ಯಾಣಕ್ಕಾಗಿ ಮೀಸಲಿಟ್ಟ ಅನುದಾನವನ್ನು ಸರಿಯಾಗಿ ಬಳಕೆ ಮಾಡುತ್ತಿಲ್ಲ. ಗ್ರಾಮಸಭೆಗಳನ್ನು ಸಹ ಕರೆದಿಲ್ಲ. ಈ ಸಮುದಾಯದ ಬಗ್ಗೆ ಇಷ್ಟೊಂದು ನಿರ್ಲಕ್ಷ್ಯ ಏಕೆ ಎಂದು ಸರ್ಕಾರದ ವಿರುದ್ಧವೇ ಹರಿಹಾಯ್ದರು.

ಎಸ್‌ಸಿ/ಎಸ್‌ಟಿ ಸಮುದಾಯ ಸಂವಿಧಾನಬದ್ಧವಾದ ಮೀಸಲಾತಿಯನ್ನು ಸದ್ಬಳಕೆ ಮಾಡಿಕೊಂಡು ಇತರರಂತೆ ಮುಂದೆ ಬರಬೇಕೆಂಬುದು ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಕನಸಾಗಿತ್ತು.ಸರ್ಕಾರ ಅನುದಾನವನ್ನು ಮೀಸಲಿಟ್ಟಿದ್ದರೂ ಏಕೆ ಸದ್ಬಳಕೆಯಾಗುತ್ತಿಲ್ಲ? ಗ್ರಾಮ ಪಂಚಾಯಿತಿ ಸಭೆ ಕರೆಯಲು ಇರುವ ಸಮಸ್ಯೆಯಾದರೂ ಏನು ಎಂದು ಪ್ರಶ್ನಿಸಿದರು. ನನಗಿರುವ ಮಾಹಿತಿ ಪ್ರಕಾರ, ಈ ಎರಡೂ ಸಮುದಾಯದ ಕಲ್ಯಾಣಕ್ಕಾಗಿ ಮೀಸಲಿಟ್ಟಿದ್ದ ಅನುದಾನದಲ್ಲೇ ಗೋಲ್‌ಮಾಲ್ ಆಗಿದೆ. ಅಂದಾಜು 50 ಸಾವಿರ ಕೋಟಿ ಹಣ ದುರ್ಬಳಕೆಯಾಗಿದೆ ಎಂದು ಆರೋಪಿಸಿದರು. ಸದಸ್ಯರು ಈ ಆರೋಪ ಮಾಡುತ್ತಿದ್ದಂತೆ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಸದಸ್ಯರಾದ ರವಿಕುಮಾರ್, ಪೂಜಾರ್, ಹೇಮಲತಾ ನಾಯಕ್ ಮತ್ತಿತರರು ಇದು ಗಂಭೀರವಾದ ಆರೋಪ. ಸರ್ಕಾರದ ಮೇಲೆಯೇ ಸದಸ್ಯರೊಬ್ಬರು ಇಷ್ಟು ದೊಡ್ಡ ಮೊತ್ತದ ಭ್ರಷ್ಟಾಚಾರದ ಆರೋಪ ಮಾಡಿದ್ದಾರೆ. ತಕ್ಷಣವೇ ಇದನ್ನು ತನಿಖೆಗೆ ವಹಿಸಿ ಎಂದು ಒತ್ತಾಯಿಸಿದರು.

ಆಗ ಸದಸ್ಯರ ಪರವಾಗಿ ಎದ್ದು ನಿಂತ ಸದಸ್ಯ ಶಿವಕುಮಾರ್‌ರವರು, ಸದಸ್ಯರು ಈ ಸರ್ಕಾರದ ಅವಧಿಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆರೋಪ ಮಾಡಿಲ್ಲ. ಕಳೆದ 10 ವರ್ಷಗಳ ಅವಧಿಯಲ್ಲಿ ಆಗಿದೆ ಎಂದು ಹೇಳಿದ್ದಾರೆ. 2015 ರಿಂದಲೂ ಇದು ನಡೆದಿದೆ ಎಂಬುದು ಅವರ ಆರೋಪ ಎಂದು ಸಮರ್ಥನೆ ಮಾಡಿಕೊಂಡರು. ಆಗ ಪ್ರತಿಪಕ್ಷದ ಸದಸ್ಯರು ಎಸ್‌ಐಟಿ ತನಿಖೆಯಾಗಲೇಬೇಕು, ಇಷ್ಟು ದೊಡ್ಡ ಮಟ್ಟದ ಹಗರಣ ನಡೆಸಿದವರ ಮೇಲೆ ತನಿಖೆಯಾಗಲೇಬೇಕು. ತನಿಖೆಗೆ ಸಭಾಪತಿಯವರು ಸರ್ಕಾರಕ್ಕೆ ಸೂಚನೆ ನೀಡಬೇಕು ಎಂದು ಒತ್ತಾಯಿಸಿದರು.ಈ ಹಂತದಲ್ಲಿ ಆಡಳಿತ ಮತ್ತು ಪ್ರತಿಪಕ್ಷದ ಸದಸ್ಯರ ನಡುವೆ ಮತ್ತೆ ಮಾತಿನ ಚಕಮಕಿ ನಡೆಯಿತು. ವಿಷಯ ಪ್ರಸ್ತಾಪಿಸಲು ಪುನಃ ಛಲವಾದಿ ನಾರಾಯಣಸ್ವಾಮಿ ಮುಂದಾದಾಗ ಆಡಳಿತ ಪಕ್ಷದ ಮುಖ್ಯ ಸಚೇತಕ ಸಲೀಂ ಅಹಮದ್ ಅವರು ಪ್ರಶ್ನೋತ್ತರ ಅವಧಿಯಲ್ಲಿ ಚರ್ಚೆಗೆ ಅವಕಾಶವಿದೆಯೇ ಇದ್ದರೆ ಯಾವ ನಿಯಮದಡಿ ಕೊಡುತ್ತೀರಿ ಈ ರೀತಿ ಸದಸ್ಯರು ಸದನದಲ್ಲಿ ವರ್ತಿಸುವುದು ಸರಿಯಲ್ಲ ಎಂದು ಆಕ್ಷೇಪಿಸಿದರು. ಬಳಿಕ ಸಭಾಪತಿಯವರು ಪರಿಸ್ಥಿತಿಯನ್ನು ತಿಳಿಗೊಳಿಸಿದರು.

## ಮೃತ ವ್ಯಕ್ತಿ ಯೊಗೇಶ ನಾವಿ ಮನೆಗೆ ಭೇಟಿ ಸಾಂತ್ವನ

❑ ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಇತ್ತೀಚಿಗೆ ರಸ್ತೆ ಅಪಘಾತದಲ್ಲಿ ನಿಧನರಾದ ಹಂಚಲಿ ಗ್ರಾಮದ ಯೊಗೇಶ ನಾವಿ ಮನೆಗೆ ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ, ಸಮಾಜ ಸೇವಕರಾದ ಡಾ.ಪ್ರಭುಗೌಡ ಲಿಂಗದಳ್ಳಿ ಅವರು ಶುಕ್ರವಾರ ಭೇಟಿ ನೀಡಿ ಕುಟುಂಬಕ್ಕೆ ಸಾಂತ್ವನ ತಿಳಿಸಿ ತಮ್ಮ ನೇತೃತ್ವದ ಪಿ.ಬಿ.ಎಲ್. ಫೌಂಡೇಶನ್ ವತಿಯಿಂದ ಆರ್ಥಿಕ ಸಹಾಯ ನೀಡಿದರು.



ಈ ಸಂದರ್ಭದಲ್ಲಿ ಮಾತನಾಡಿದ ಅವರು ಕುಟುಂಬಕ್ಕೆ ಆಸರೆಯಾದ ಯೊಗೇಶ ಅವರು ರಸ್ತೆ ಅಪಘಾತದಲ್ಲಿ ಮೃತಪಟ್ಟಿರುವುದು ನೋವಿನ ಸಂಗತಿ, ನನ್ನ ಕೈಲಾದಷ್ಟು ಆರ್ಥಿಕ ಸಹಾಯ ಮಾಡಿದ್ದೇನೆ ಇದರ ಜೊತೆಗೆ ಅವರ ಮಕ್ಕಳ ಶಿಕ್ಷಣದ ವ್ಯವಸ್ಥೆಯನ್ನು ಮಾಡುತ್ತೇನೆ ಕುಟುಂಬಕ್ಕೆ ಆರೋಗ್ಯ ಸಮಸ್ಯೆಗಳು ಎದುರಾದಲ್ಲಿ ಇದನ್ನು ಸಂಪೂರ್ಣವಾಗಿ ಉಚಿತವಾಗಿ ಆಗುವಂತೆ ನೋಡಿಕೊಳ್ಳುತ್ತೇನೆ. ಗ್ರಾಮದ ಗಣ್ಯರು ಈ ಕುಟುಂಬದ ಸದಸ್ಯರ ಸುಖ ದುಃಖಗಳಲ್ಲಿ ಸದಾ ಭಾಗಿಯಾಗಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ ಎಂದರು. ಈ ಸಮಯದಲ್ಲಿ ನಾವಿ ಕುಟುಂಬದ ಸದಸ್ಯರು, ಗ್ರಾಮದ ಹಿರಿಯರು ಹಾಗೂ ಪಕ್ಷದ ಮುಖಂಡರು ಉಪಸ್ಥಿತರಿದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

## ಗೃಹಲಕ್ಷ್ಮಿ ಯೋಜನೆಯ ಹಣದಿಂದ ಮೂವರು ಹೆಣ್ಣುಮಕ್ಕಳಿಗೆ ಜೀವವಿಮೆ ಮಾಡಿಸಿದ ಮಹಿಳೆಗೆ ಸನ್ಮಾನ



❑ ನೈಜ್ಯ ದೆಸೆ ನ್ಯೂಸ್

ಕೊಪ್ಪಳ: ಸರಕಾರದ ಮಹತ್ವಾಕಾಂಕ್ಷೆಯ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮಿ ಯೋಜನೆಯ ಹಣದಿಂದ ಮಹಿಳೆಯೊಬ್ಬರು ತನ್ನ ಮೂವರು ಹೆಣ್ಣುಮಕ್ಕಳ ಜೀವವಿಮೆ ಮಾಡಿಸಿ ಸರಕಾರದ ಯೋಜನೆಯನ್ನು ಸದುಪಯೋಗಪಡಿಸಿಕೊಂಡಿದ್ದಾರೆ.

ಕುಕನೂರು ತಾಲೂಕಿನ ಮಂಗಳೂರು ಗ್ರಾಮದ ಜ್ಯೋತಿ ಕನಕಪ್ಪ ಕಲ್ಲೂರು ಎಂಬ ಗೃಹಿಣಿ, ರಾಜ್ಯ ಸರಕಾರದ ಗೃಹಲಕ್ಷ್ಮಿ ಯೋಜನೆಯಿಂದ ಬರುವ ತಿಂಗಳ 2000 ರೂ.ಹಣವನ್ನು ತನ್ನ ಮೂವರು ಹೆಣ್ಣು ಮಕ್ಕಳ ಹೆಸರಿನ ಮೇಲೆ ಎಲ್‌ಐಸಿ ಪಾಲಿಸಿ ಮಾಡಿಸಿ ಗಮನ ಸೆಳೆದಿದ್ದಾರೆ. ಸರಕಾರಿ ಯೋಜನೆಯನ್ನು ಸದುಪಯೋಗಪಡಿಸಿಕೊಂಡ ಜ್ಯೋತಿ ಅವರನ್ನು ತಾಲೂಕು ಪಂಚಾಯತಿ ಇಒ ಸಂತೋಷ್ ಬಿರಾದರ್ ಸನ್ಮಾನಿಸಿ ಗೌರವಿಸಿದ್ದಾರೆ. ಗೃಹಲಕ್ಷ್ಮಿ, ಶಕ್ತಿ ಯೋಜನೆ, ಯುವನಿಧಿ, ಅನ್ನಭಾಗ್ಯ ಹಾಗೂ ಗೃಹ ಜ್ಯೋತಿ ಯೋಜನೆಯಿಂದ ಬಡ ಹಾಗೂ ಮಧ್ಯಮ ವರ್ಗದವರಿಗೆ ಸಾಕಷ್ಟು ಬದಲಾವಣೆ ಹಾಗೂ ಅನುಕೂಲತೆ ಉಂಟಾಗಿವೆ.

ಈ ಕುರಿತು ಪ್ರತಿಕ್ರಿಯಿಸಿದ ತಾಲೂಕು ಪಂಚಾಯತಿ ಇಒ ಸಂತೋಷ್ ಬಿರಾದರ್, ಮಂಗಳೂರಿನ ಗೃಹಣಿಯೊಬ್ಬರು ಗ್ರಹಲಕ್ಷ್ಮಿ ಯೋಜನೆಯಿಂದ ಬರುವ 2000ರೂ. ಹಣವನ್ನು ತನ್ನ ಮೂವರು ಹೆಣ್ಣು ಮಕ್ಕಳ ಹೆಸರಿಗೆ ಎಲ್‌ಐಸಿ ಪಾಲಿಸಿ ಮಾಡಿಸಿರುವುದು ಅತ್ಯಂತ ಶ್ಲಾಘನೀಯ ಮತ್ತು ಸ್ಪೂರ್ತಿದಾಯಕ ಕಾರ್ಯವಾಗಿದೆ ಎಂದು ಹೇಳಿದ್ದಾರೆ.

## ಆರೋಗ್ಯ ತಪಾಸಣೆ ಮತ್ತು ಅನಿಮಿಯಾ ತಡೆಗಟ್ಟುವ ಕಾರ್ಯಕ್ರಮ

❑ ನೈಜ್ಯ ದೆಸೆ ನ್ಯೂಸ್

ತಾಳಿಕೋಟೆ: ಗುಜರಾತ್‌ನ ಶ್ರೀಮದ್ ರಾಯಚಂದ ಆಸ್ಪತ್ರೆ ಮತ್ತು ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಇಲಾಖೆ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಆಯ್. ಆರ್.ಡಿ. ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಸ್ಪಂದನ ಸ್ವಯಂ ಸೇವಾ ಸಂಸ್ಥೆ, ಭಾರತೀಯ ಸುರಾಜ್ಯ ಸಂಸ್ಥೆಗಳ ಇವುಗಳ ಸಂಯುಕ್ತ ಆಶ್ರಯದಲ್ಲಿ ಆರೋಗ್ಯ ತಪಾಸಣೆ ಮತ್ತು ಅನಿಮಿಯಾ ತಡೆಗಟ್ಟುವ ಕುರಿತು ಜಾಗೃತಿ ಕಾರ್ಯಕ್ರಮ ಶುಕ್ರವಾರ ಪಟ್ಟಣದ ಎಸ್.




ಕೆ ಬಾಲಕಿಯರ ಪ್ರೌಢಶಾಲೆಯಲ್ಲಿ ನಡೆಯಿತು. ಎ ಎಮ್ ಪಿ ಯೋಜನಾ ಸಂಂ–ಯೋಜಕರಾದ ಶಾಂತಾ ಬೇಲಾಳ, ಸೋಮು ಸಜ್ಜನ, ಧನಪಾಲ ಬೇಡರಟ್ಟಿ, ಕುಸುಮ ಮಠ,ಶಕುಂತಲಾ ಮಠ, ಸಹನಾ ಪಾಟೀಲ ಮತ್ತು ಸಿಬ್ಬಂದಿಗಳು 191 ವಿದ್ಯಾರ್ಥಿನಿಯರ ರಕ್ತ ಪರೀಕ್ಷೆ ನಡೆಸಿ ರಕ್ತಹೀನತೆ ಕಂಡು ಬಂದ 101 ವಿದ್ಯಾರ್ಥಿನಿಯರಿಗೆ ಮೂರು ತಿಂಗಳುಗಳ ಪೊಲಿಕ್ ಎಸಿಡ್ ಮಾತ್ರೆಗಳನ್ನು ನೀಡಿ ಮತ್ತೆ ಮೂರು ತಂಗಳ ನಂತರ ಮತ್ತೆ ರಕ್ತ ಪರೀಕ್ಷೆ ನಡೆಸುವುದಾಗಿ ತಿಳಿಸಿದರು. ರಕ್ತಹೀನತೆಯಿಂದ ಹೊರಬರಲು ಸಮತೋಲನ ಆಹಾರದ ಮಹತ್ವ ತಿಳಿಸಿದರು. ಈ ವೇಳೆಯಲ್ಲಿ ಮುಖ್ಯೋಪಾಧ್ಯಾಯ ಡಾ.ಅನಿಲಕುಮಾರ ಇರಾಜ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

## ಸಾರ್ವತ್ರಿಕ ಆರೋಗ್ಯ ರಕ್ಷಣೆ ದಿನದ ಅಂಗವಾಗಿ ಕಾನೂನು ಅರಿವು ನೆರವು ಕಾರ್ಯಕ್ರಮ



ಸಿಂಧನೂರು: ಡಿ 12 ತಾಲೂಕು ಕಾನೂನು ಸೇವಾ ಸಮಿತಿ, ತಾಲೂಕು ನ್ಯಾಯವಾದಿಗಳ ಸಂಘ, ಸನ್‌ರೈಸ್ ಗ್ರೂಪ್ ಆಫ್ ಇನ್ಸ್ಟಿಟ್ಯೂಷನ್ಸ್ (ಡಿ. ಫಾರ್ಮಸಿ, ನರ್ಸಿಂಗ್, ಪ್ಯಾರಾಮೆಡಿಕಲ್ ಕಾಲೇಜು) ಹಾಗೂ ತಾಲೂಕು ಆರೋಗ್ಯ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಸಾರ್ವತ್ರಿಕ ಆರೋಗ್ಯ ರಕ್ಷಣೆ ದಿನದ ಕಾನೂನು ಅರಿವು ನೆರವು ಕಾರ್ಯಕ್ರಮವನ್ನುವನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿದ್ದ ಸನ್ಮಾನ್ಯ ನ್ಯಾಯಾಧೀಶರು ಶ್ರೀಮತಿ ರೂಪ, ಪ್ರಧಾನ ಸಿವಿಲ್ ನ್ಯಾಯಾಧೀಶರು, ಹಾಗೂ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಕೆ. ಭೀಮನಗೌಡ ಅಧ್ಯಕ್ಷರು ? ತಾಲೂಕು ನ್ಯಾಯವಾದಿಗಳ ಸಂಘ ಸಿಂಧನೂರು ಹಾಗೂ ಎಲ್ಲಾ ಮುಖ್ಯ ಅತಿಥಿಗಳಿಗೆ ಪುಷ್ಪಾರ್ಚನೆ ಮೂಲಕ ಆತ್ಮೀಯ ಸ್ವಾಗತ ನೀಡಲಾಯಿತು. ಉದ್ಘಾಟನಾ ಕಾರ್ಯಕ್ರಮದಲ್ಲಿ ಗಿಡಕ್ಕೆ ನೀರು ಹಾಕುವ ಮೂಲಕ ಆರೋಗ್ಯ ದಿನದ ಕಾರ್ಯಕ್ರಮಕ್ಕೆ ಸಂಕೇತಾತ್ಮಕ ಆರಂಭ ಮಾಡಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಶ್ರೀಮತಿ ರೂಪ ಅವರು, “ದೇವರು ಪ್ರತಿಯೊಬ್ಬರಿಗೂ ನೀಡಿರುವ ದೇಹವನ್ನು ಸರಿಯಾದ ಕ್ರಮಗಳು, ನಿಯಮಿತ ವ್ಯಾಯಾಮ ಹಾಗೂ ಆರೋಗ್ಯಕರ ಜೀವನಶೈಲಿಯಿಂದ ಕಾಪಾಡಿಕೊಂಡಾಗ ಮಾತ್ರ ‘ಆರೋಗ್ಯವೇ ಭಾಗ್ಯ’ ಎಂಬ ನುಡಿ ಸಾರ್ಥಕವಾಗುತ್ತದೆ” ಎಂದು ತಿಳಿಸಿದರು. ಅಧ್ಯಕ್ಷೀಯ ಭಾಷಣದಲ್ಲಿ ಶ್ರೀ ಕೆ. ಭೀಮನಗೌಡ ವಕೀಲರು ದಿನದ 24 ಗಂಟೆಗಳನ್ನು ಸರಿಯಾಗಿ ಮೂರು ಭಾಗಗಳಾಗಿ ಹಂಚಿಕೊಂಡು ಕೆಲಸ, ವಿಶ್ರಾಂತಿ ಮತ್ತು ಕುಟುಂಬದೊಂದಿಗೆ ಗುಣಮಟ್ಟದ ಸಮಯ ಕಳೆಯುವ ಮೂಲಕ ಶಾರೀರಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂದು ಸಲಹೆ ನೀಡಿದರು.

ಶ್ರೀ ವಿಜಯಚಂದ್ರ ಪ್ರಭು ಬಿ, ಸಹಾಯಕ ಸರಕಾರಿ ಅಭಿಯೋಜಕರು, ಆರೋಗ್ಯ ಕಾರ್ಯಕರ್ತರ ಹಕ್ಕು ರಕ್ಷಣೆ ಹಾಗೂ ಕಾನೂನು ಪ್ರೋವಿಷನ್ಸ್ ಕು–ರಿತು ಮಾಹಿತಿ ನೀಡಿ, ಗುಣಮಟ್ಟದ ಸಾರ್ವಜನಿಕ ಆರೋಗ್ಯ ಸೇವೆಯನ್ನು ನಿಷ್ಠೆಯಿಂದ ಒದಗಿಸುವ ಅಗತ್ಯವನ್ನು ವಿವರಿಸಿದರು. ಶ್ರೀ ಶೇಖರಪ್ಪ ಗಡೆದ್, ಖಜಾಂಚಿ ತಾಲೂಕು ನ್ಯಾಯವಾದಿಗಳ ಸಂಘ, ಇವರು ಮಾತನಾಡಿ “ಸಾಲವಿಲ್ಲದವನೂ, ಆರೋಗ್ಯವಂತನೂ ಆದವನೇ ನಿಜವಾದ ಶ್ರೀಮಂತ” ಎಂದು ಆರೋಗ್ಯದ ಮಹತ್ವವನ್ನು ಒತ್ತಿಹೇಳಿದರು,ಮುಖ್ಯ ಉಪನ್ಯಾಸಕರಾಗಿ ಆಗಮಿಸಿದ ಶ್ರೀಮತಿ ಗೀತಾ ಹಿರೇಮಠ, ಕ್ಷೇತ್ರ ಆರೋಗ್ಯ ಶಿಕ್ಷಣ ಅಧಿಕಾರಿ, ತಾಯಿ?ಮಗು ಆರೋಗ್ಯ, ನವಜಾತ ಶಿಶು ಆರೋಗ್ಯ, ಲಸಿಕಾ ಕಾರ್ಯಕ್ರಮ, ಕುಷ್ಠರೋಗ ನಿರ್ಮೂಲನೆ, ಇಂದ್ರಧನುಷ್, ಬಾಯಿ ಆರೋಗ್ಯ ಸೇ–ರಿದಂತೆ ಅನೇಕ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಬಗ್ಗೆ ಪ್ರಬೋಧನಾತ್ಮಕ ಉಪನ್ಯಾಸ ನೀಡಿ ವಿದ್ಯಾರ್ಥಿಗಳಲ್ಲಿ ಆರೋಗ್ಯ ಜಾಗೃತಿ ಮೂಡಿಸಿದರು.

ಕಾರ್ಯಕ್ರಮದಲ್ಲಿ ಶ್ರೀ ಲಾಜರ್ ಸಿರಿಲ್ ಜಿ, ನರ್ಸಿಂಗ್ ಪ್ರಾಚಾರ್ಯರು, ಆರೋಗ್ಯ?ಸರ್ಕಾರಿ ಯೋಜನೆಗಳಾದ ಪ್ರಧಾನ ಮಂತ್ರಿ ಮಾತೃವಂದನಾ ಯೋಜನೆ, ಅನೀಮಿಯಾ ಮುಕ್ತ ಭಾರತ, ಆರ್.ಬಿ.ಎಸ್.ಕೆ, ಜೆ.ಎಸ್.ಎಸ್.ವೈ, ಪಿ.ಎಂ.ಎಂ.ಎಸ್.ವೈ, ಕಾಯಕಲ್ಪ, ಲಕ್ಷ್ಯ ಹಾಗೂ ಸಾಂಕ್ರಾಮಿಕ?ಅಸಾಂಕ್ರಾಮಿಕ ರೋಗ ತಡೆ ಕಾರ್ಯಕ್ರಮಗಳ ಕುರಿತು ವಿದ್ಯಾರ್ಥಿಗಳಿಗೆ ಸಮಗ್ರ ಮಾಹಿತಿ ನೀಡಿದರು.ಕಾರ್ಯಕ್ರಮದ ಕುರಿತು ತಯಾರಿಸಲಾದ ಆರೋಗ್ಯ ಜಾಗೃತಿ ಫಲಕ ಮತ್ತು ರಂಗೋಲಿಗಳನ್ನು ಪ್ರಧಾನ ನ್ಯಾಯಾಧೀಶರು, ಕಾರ್ಯಕ್ರಮದ ಅಧ್ಯಕ್ಷರಾದ ಭೀಮನಗೌಡರು ಹಾಗೂ ಎಲ್ಲಾ ಗಣ್ಯರು ವೀಕ್ಷಿಸಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ

- ❖ ಸನ್ಮಾನ್ಯ ನ್ಯಾಯಾಧೀಶರು ಶ್ರೀಮತಿ ರೂಪ
- ❖ ಶ್ರೀ ಕೆ. ಭೀಮನಗೌಡ ? ಅಧ್ಯಕ್ಷ, ತಾಲೂಕು ನ್ಯಾಯವಾದಿಗಳ ಸಂಘ
- ❖ ಹಿರಿಯ ವಕೀಲರು ಶ್ರೀ ಖಾಜಿ ಮಲಿಕ್
- ❖ ಸಹಾಯಕ ಸರಕಾರಿ ಅಭಿಯೋಜ–ಕರು ಶ್ರೀ ವಿಜಯಚಂದ್ರ ಪ್ರಭು ಬಿ
- ❖ ಖಜಾಂಚಿ ಶ್ರೀ ಶೇಖರಪ್ಪ ಗಡೆದ್ ತಾಲೂಕು ನ್ಯಾಯವಾದಿಗಳ ಸಂಘ ಸಿಂಧನೂರು
- ❖ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಶ್ರೀಮತಿ ಗೀತಾ ಹಿರೇಮಠ
- ❖ ಸನ್‌ರೈಸ್ ಗ್ರೂಪ್ ಆಫ್ ಇನ್ಸ್ಟಿಟ್ಯೂಶನ್ ಕಾರ್ಯದರ್ಶಿ ಇರ್ಷಾದ್ ಕೆ. ಅತ್ತಾರ್
- ❖ ಆಡಳಿತ ಮಂಡಳಿ ಸದಸ್ಯ ಆಸಿಫ್
- ❖ ಪ್ರಾಚಾರ್ಯರಾದ ಚಕ್ರವರ್ತಿ, ವಾಸಿಂ ಹುಸೇನ್
- ❖ ನರ್ಸಿಂಗ್ ಪ್ರಾಚಾರ್ಯ ಲಾಜರ್ ಸಿರಿಲ್
- ❖ ಉಪನ್ಯಾಸಕರು: ಆಶು ಪಾಷ, ರಾಜೇಶ್, ವೀರೇಶ್, ಕುಮಾರಿ ಶೋಭಾ, ಕುಮಾರಿ ವೀರೇಶ್ವರಿ, ಶ್ರೀಮತಿ ರಾಧಿಕಾ, ಕುಮಾರಿ ಚೈತ್ರ,ಎಲ್ಲಾ ವಿಭಾಗದ ವಿದ್ಯಾರ್ಥಿಗಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು

## ಸಾಹಿತ್ಯ ಸಿಂಚನ

### ಕಾಲ ಕಲ್ಲಾದ ಹೊತ್ತು.!

ತೈಲವೇ ತೀರಿತೋ..
ಬತ್ತಿಯೇ ಮುಗಿಯಿತೋ..
ದೀಪ ಆರಿ ಹೋಯಿತು.!

ದೈವವೇ ಕರೆಯಿತೋ
ಭವವೇ ತೊರೆಯಿತೋ
ಜೀವ ದೂರ ಸರಿಯಿತು.!

ಉಸಿರೇ ನಿಂತಿತೋ
ಒಡಲೇ ಬರಿಯಿತೋ
ದೇಹ ಧರೆಗೆ ಎರಗಿತು.!

ಎದೆ ಪ್ರಾಣ ಹಾರಿತೋ
ಇಳೆ ಋಣ ತೀರಿತೋ
ಸಾವು ಕರವ ಚಾಚಿತು.!

ಬಾಳಕಕ್ಷೆ ಕಳೆಯಿತೋ
ಬಾನನಕ್ಷೆ ಹೊಳೆಯಿತೋ
ಬದುಕು ಬೆಳಕು ಕರಗಿತು.!

ಜೀವನ ತೆರೆ ಬಿದ್ದಿತೋ
ಕಾಲನ ಕರೆ ಕೇಳಿತೋ
ಜೀವದಾಟ ಕೊನೆಯಾಯಿತು.!

ಬದುಕಿನವಧಿ ಮೀರಿತೋ
ಸಾವು ಸುಪರ್ದಿ ಕೋರಿತೋ
ಹೆಸರು ಉಸಿರನೇ ಚೆಲ್ಲಿತು.!

ಆಯೋಪಾತ್ರೆ ಖಾಲಿಯಾಯ್ತು
ಆತ್ಮಹವಿಸ್ಸವನ ಪಾಲಿಗಾಯ್ತು
ಬಾಳಸಂತೆ ಯಾತ್ರೆ ಮುಗಿಯಿತು.!

ಹೊತ್ತು ಹೊತ್ತಿ ಉರಿಯಿತು
ಶ್ವಾಸತುತ್ತು ಕಾಲನ ತೊತ್ತಾಯ್ತು
ಒಡಲುಸಿರು ಒಡೆಯನ ಸ್ವತ್ತಾಯ್ತು.!

ಬಾಳಕ್ಷಣ ಯಾವಾಗ ಎಂತೋ
ಬುವಿಯ ಋಣವದು ಎನಿತೋ
ಅಕ್ಷರಶಃ ಅನೂಹ್ಯಗಳ ತಂತು.!

ಕೊಡದೆ ಸುಳಿವುಗಳನು ಇನಿತು
ಕಾಲವಾಗಿಸುವ ಕಾಲನ ಕರಾಮತ್ತು
ಕಂಡು ಕಂಗಾಲು ಕಂಗಳು ಕಂಬನಿಹೊತ್ತು.!

ಎ.ಎನ್.ರಮೇಶ್.ಗುಬ್ಬಿ.

# ಸೋಲಿಡಾರಿಟಿ ಯೂತ್ ಮೂವ್ಮೆಂಟ್ ಕರ್ನಾಟಕದ ಪತ್ರಿಕಾ ಗೋಷ್ಠಿ

ನೈಜ್ಯ ದೇಸಿ ನ್ಯೂಸ್

**ಸೋಲಿಡಾರಿಟಿ ಯೂತ್ ಮೂವ್ಮೆಂಟ್ ಕರ್ನಾಟಕದ ವತಿಯಿಂದ ಬೆಳಗಾವಿಯಲ್ಲಿ ಪತ್ರಿಕಾ ಗೋಷ್ಠಿ ಹಮ್ಮಿಕೊಳ್ಳಲಾಯಿತು. ರಾಜ್ಯದಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಸೈಬರ್ ವಂಚನೆಗಳು ಮತ್ತು ಡಿಜಿಟಲ್ ಅಪರಾಧಗಳ ಕುರಿತು ಗಂಭೀರ ಆತಂಕವನ್ನು ಈ ಸಂದರ್ಭದಲ್ಲಿ ವ್ಯಕ್ತಪಡಿಸಲಾಯಿತು.**

ಗೋಷ್ಠಿಯಲ್ಲಿ ಮಾತನಾಡಿದ ರಾಜ್ಯಾಧ್ಯಕ್ಷ ಡಾ. ನಸೀಮ್ ಅಹ್ಮದ್ ಅವರು ಸರ್ಕಾರದ ಅಧಿಕೃತ ಅಂಕಿಅಂಶಗಳನ್ನು ಉಲ್ಲೇಖಿಸಿ, ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ನಾಗರಿಕರು ಐದು ಸಾವಿರ ಕೋಟಿ ರೂಪಾಯಿಗಿಂತ ಹೆಚ್ಚು ಹಣವನ್ನು ಸೈಬರ್ ವಂಚನೆಗಳ ಮೂಲಕ ಕಳೆದುಕೊಂಡಿದ್ದಾರೆ ಎಂದು ತಿಳಿಸಿದರು. "ಇದರ ರಿಕವರಿ ಪ್ರಮಾಣ ಕೇವಲ 10% ಮಾತ್ರವಾಗಿರುವುದು ಅತ್ಯಂತ ಆತಂಕಕಾರಿ," ಎಂದು ಅವರು ಹೇಳಿದರು.

ಅವರು ರಾಜ್ಯ ಸರ್ಕಾರಕ್ಕೆ ಕೆಳಗಿನ ಮುಖ್ಯ ಬೇಡಿಕೆಗಳನ್ನು ಮಂಡಿಸಿದರು:



1. ಬೆಳಗಾವಿ ಅಧಿವೇಶನದಲ್ಲಿ ಸೈಬರ್ ವಂಚನೆ ವಿಷಯವನ್ನು ಪ್ರಮುಖ ಚರ್ಚಾ ಅಂಶವನ್ನಾಗಿ ಮಾಡಿ, ಕಠಿಣ, ಸ್ಪಷ್ಟ ಹಾಗೂ ಪರಿಣಾಮಕಾರಿ ನೀತಿಗಳನ್ನು ತಕ್ಷಣ ರೂಪಿಸಬೇಕು.
2. ವಂಚನೆಗೆ ಒಳಗಾದ ನಾಗರಿಕರ ನಷ್ಟವನ್ನು ಮರಳಿ ಪಡೆಯುವಂತೆ ರಾಜ್ಯ ಸರ್ಕಾರವು State Guarantee Mechanism ಅನ್ನು ರಚಿಸಬೇಕು.
3. ರಾಜ್ಯ ಮಟ್ಟದಲ್ಲಿ ಸ್ವತಂತ್ರವಾಗಿ ಹಾಗೂ 247 ಕಾರ್ಯನಿರ್ವಹಿಸುವ 'ಸೈಬರ್ ಸಹಾಯವಾಣಿ' ಸ್ಥಾಪಿಸಬೇಕು.
4. ಯುವಕರು ಹಾಗೂ ಸಾರ್ವಜನಿಕರಿಗಾಗಿ ಸೈಬರ್ ಸುರಕ್ಷತೆ, ಹ್ಯಾಕಿಂಗ್ ತಡೆ ಮತ್ತು ಡಿಜಿಟಲ್ ಜಾಗೃತಿ ಕುರಿತು ವ್ಯಾಪಕ ಅಭಿಯಾನಗಳನ್ನು ಜಾರಿಗೆ ತರಬೇಕು.

ನಂತರ ಮಾತನಾಡಿದ ರಾಜ್ಯ ಪ್ರಧಾನ ಕಾರ್ಯದರ್ಶಿ ಮುಹಮ್ಮದ್ ಇಸ್ಮಾಯಿಲ್ ತೀರ್ಥಹಳ್ಳಿ ಅವರು ಸರ್ಕಾರದ ಧೋರಣೆಗಳ ಮೇಲೆ ತೀವ್ರ ಟೀಕೆ ನಡೆಸಿದರು. "ಅಧಿವೇಶನಗಳು ಜನರ ಹಣದಿಂದ ನಡೆಯುತ್ತವೆ. ಆದ್ದರಿಂದ ಜನಪ್ರತಿನಿಧಿಗಳು ರಾಜಕೀಯ ಕಚ್ಚಾಟಗಳನ್ನು ಬಿಟ್ಟು ಜನರ ನಿಜವಾದ ಸಮಸ್ಯೆಗಳ ಕಡೆ ಗಮನ ಹರಿಸಬೇಕು. ಜನರು ಬೆವರಿಳಿಸಿ ಸಂಪಾದಿಸಿದ ಹಣವನ್ನು ರಕ್ಷಿಸುವುದು ರಾಜ್ಯದ ಜವಾಬ್ದಾರಿಯಾಗಿದೆ. ನಮ್ಮ ಧ್ವನಿ ಸುವರ್ಣಸೌಧದವರೆಗೆ ತಲುಪಬೇಕು," ಎಂದು ಅವರು ಒತ್ತಿ ಹೇಳಿದರು.

ನಗರಾಧ್ಯಕ್ಷ ಮಸೂದ್ ಅಹ್ಮದ್ ಮಾತನಾಡಿ, ಸೈಬರ್ ವಂಚನೆ ವಿರುದ್ಧ ರಾಜ್ಯಾದ್ಯಂತ ನಡೆದ ಅಭಿಯಾನದ ಭಾಗವಾಗಿ, ಸಾರ್ವಜನಿಕ ಸಭೆಗಳು, ಸ್ತಬ್ಧಚಿತ್ರ ಪ್ರದರ್ಶನಗಳು, ವಿದ್ಯಾರ್ಥಿಗಳಿಗೆ ಜಾಗೃತಿ ಕಾರ್ಯಕ್ರಮಗಳು, ಯುವ ಸಮಾವೇಶಗಳು,ಸೈಬರ್ ಅಪರಾಧ ವಿಭಾಗದ ಸಹಭಾಗಿತ್ವದಲ್ಲಿ ಕಾರ್ಯಾಗಾರ ಸೇರಿದಂತೆ ಹಲವು ಚಟುವಟಿಕೆಗಳನ್ನು ನಡೆಸಲಾಗಿದೆ. ರಾಜ್ಯದ ವಿವಿಧ ಭಾಗಗಳಲ್ಲಿ ಜನಪ್ರತಿನಿಧಿಗಳಿಗೆ ಮನವಿ ಪತ್ರಗಳ ಮೂಲಕ ಬೆಳಗಾವಿ ಅಧಿವೇಶನದಲ್ಲಿ ಚರ್ಚಿಸಿ ಕಠಿಣ ಕಾನೂನು ಕ್ರಮ ಕೈಗೊಳ್ಳಲು ತಿಳಿಸಲಾಯಿತು ಎಂದರು ಈ ಸಂದರ್ಭದಲ್ಲಿ ಬೆಳಗಾವಿ ನಗರ ಘಟಕದ ಕಾರ್ಯದರ್ಶಿ ಏಜಾಝ್ ಸಯೀದ್ ಉಪಸ್ಥಿತರಿದ್ದರು.

# ದಲಿತರಿಗೆ ಸಿಎಂ ಸ್ಥಾನ ಕೊಡಿ, ಜಮೀರ್ ಅಹಮದರಿಗೆ ಡಿಸಿಎಂ ಸ್ಥಾನ ನೀಡಿ –ಕಾಸಿಂ ಮುರಾರಿ ಒತ್ತಾಯ




ನೈಜ್ಯ ದೇಸಿ ನ್ಯೂಸ್

**ಮಸ್ಕಿ: ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲು ದಲಿತರು ಹಾಗೂ ಮುಸ್ಲಿಮರ ಪಾತ್ರ ಬಹಳ ಆದ್ದರಿಂದ ಕಾಂಗ್ರೆಸ್ ಪಕ್ಷ ದಲಿತರಿಗೆ ಮುಖ್ಯಮಂತ್ರಿ ಮಾಡಬೇಕು ಹಾಗೂ ಜಮೀರ್ ಅಹ್ಮದ್ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂದು ದಲಿತ ಮುಖಂಡ ಕಾಸಿಂ ಡಿ ಮುರಾರಿ ಒತ್ತಾಯಿಸಿದರು.**

ಮಸ್ಕಿ ಪಟ್ಟಣದ ಪತ್ರಿಕಾ ಭವನದಲ್ಲಿ ಶುಕ್ರವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು ಸಿದ್ದರಾಮಯ್ಯನವರೇ ಮುಖ್ಯಮಂತ್ರಿಯಾಗಿ ಮುಂದುವರೆಯುವುದಾದರೆ ನಮಗೆ ಸಂತೋಷ. ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಸಿಎಂ ಅವರನ್ನು ಬದಲಾವಣೆ ಮಾಡುವುದಾದರೆ ಮುಖ್ಯಮಂತ್ರಿ ಸ್ಥಾನವನ್ನು ದಲಿತರಿಗೆ ಬಿಟ್ಟುಕೊಟ್ಟು ದಲಿತ ಮುಖ್ಯಮಂತ್ರಿಯನ್ನು ಮಾಡಬೇಕು. ಕಾಂಗ್ರೆಸ್ ನಲ್ಲಿ ಖರ್ಗೆ ಅವ್ರಿಗೆ ಪ್ರಮುಖ ಆದ್ಯತೆ ನೀಡಿ ಇಲ್ಲದಿದ್ದರೆ ಸತೀಶ್ ಜಾರಕಿಹೊಳಿ, ಕೆ. ಎಚ್. ಮುನಿಯಪ್ಪ ಆರ್. ಬಿ. ತಿಮ್ಮಾಪುರ ಮಾಡಬೇಕು ಹಾಗೂ ಉಪ ಮುಖ್ಯಮಂತ್ರಿ ಸ್ಥಾನವನ್ನು ಸಚಿವರಾದ ಜಮೀರ್ ಅಹ್ಮದ್ ಖಾನ್ ಅವರಿಗೆ ನೀಡಬೇಕು.

ಇದರಿಂದ ಮುಂಬರುವ ತಾಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಸೇರಿದಂತೆ ಮುಂಬರುವ ಎಲ್ಲಾ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷದ ಗೆಲುವಿಗೆ ಸಹಾಯವಾಗಲಿದೆ ಅಲ್ಲದೆ ಮುಂಬರುವ ವಿಧಾನಸಭೆ ಚುನಾವಣೆಗೂ ಅನುಕೂಲವಾಗಲಿದೆ ಎಂದು ಹೇಳಿದರು. ನಂತರ ದಲಿತ ಮುಖಂಡರಾದ ಮಲ್ಲಪ್ಪ ಗೋನಾಳ ಮಾತನಾಡಿ ಕಾಂಗ್ರೆಸ್ ಪಕ್ಷ ದಲಿತರಿಗೆ ಹಾಗೂ ಅಲ್ಪಸಂಖ್ಯಾತರಿಗೆ ಸಿಎಂ ಡಿಸಿಎಂ ಸ್ಥಾನ ನೀಡುವ ಮೂಲಕ ನ್ಯಾಯ ಒದಗಿಸಬೇಕು ಎಂದು ಒತ್ತಾಯ ಮಾಡಿದರು ಈ ಸಂದರ್ಭದಲ್ಲಿ ಕಿರಣ್ ಮುರಾರಿ, ಚಿದಾನಂದ ಚಲುವಾದಿ ದುರುಗಪ್ಪ ಮುರಾರಿ, ಹುಲುಗಪ್ಪ ಹಸಮಕಲ, ಸೇರಿದಂತೆ ಇತರರು ಇದ್ದರು.

## ಸಿಲಿಂಡರ್ ಸ್ಫೋಟ; 7 ಮಂದಿ ಗಂಭೀರ ಗಾಯ, ಇಡೀ ಮನೆ ನೆಲಸಮ

ನೈಜ್ಯ ದೇಸಿ ನ್ಯೂಸ್

**ಕೊಪ್ಪಳ: ಜಿಲ್ಲೆಯ ಗಂಗಾವತಿ ತಾಲೂಕಿನ ಹೆಬ್ಬಾಳ ಗ್ರಾಮದಲ್ಲಿ ಭೀಕರ ಸಿಲಿಂಡರ್ ಸ್ಫೋಟ ಸಂಭವಿಸಿ ಏಳು ಜನರಿಗೆ ಗಂಭೀರ ಗಾಯಗಳಾಗಿವೆ. ಹೊಸ ಗ್ಯಾಸ್ ಸಿಲಿಂಡರ್ ಅಳವಡಿಕೆ ಮಾಡುತ್ತಿದ್ದ ವೇಳೆ ಇರಿಸಿದ್ದ ಸಿಲಿಂಡರ್ ಸ್ಫೋಟಗೊಂಡಿದ್ದು, ಮನೆಯಲ್ಲಿದ್ದವರೆಲ್ಲರೂ ತೀವ್ರ ಗಾಯಗೊಂಡ ದುರ್ಘಟನೆ ನಡೆದಿದೆ. ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ನಡೆದಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ನಡೆದ ಘಟನೆಯೇನು.**



ಹೆಬ್ಬಾಳ ಗ್ರಾಮದ ಒಂದು ಮನೆಯಲ್ಲಿ ಹಳೆ ಸಿಲಿಂಡರ್ ಖಾಲಿಯಾಗಿ ಹೊಸ ಸಿಲಿಂಡರ್ ನ್ನು ಫಿಕ್ಸ್ ಮಾಡುತ್ತಿದ್ದರು. ಹೊಸ ಸಿಲಿಂಡರ್ ಅಳವಡಿಸುತ್ತಿದ್ದಾಗ ಅಚಾನಕಾಗಿ ಸ್ಫೋಟ ಸಂಭವಿಸಿ, ಮನೆಯ ಗೋಡೆಗಳು ಕುಸಿದುಬಿದ್ದಿದೆ. ಅವಘಡದಲ್ಲಿ ಗಾಯಗೊಂಡವರನ್ನು ರಾಜ (38), ಸುರೇಶ್ (35), ದುರುಗಪ್ಪ (27), ಹುಸೇನಮ್ಮ (40), ನಾಗರಾಜ (18), ದುರುಗಮ್ಮ (17), ವಿಷ್ಣು (16), ಶ್ರೀಕಾಂತ್ (22) ಎಂದು ಗುರುತಿಸಲಾಗಿದೆ. ಎಲ್ಲರನ್ನೂ ಗಂಗಾವತಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಗಾಯಾಳುಗಳ ಸ್ಥಿತಿ ಕಂಡು ಕುಟುಂಬಸ್ಥರು ಕಣ್ಣೀರು ಹಾಕುತ್ತಿದ್ದಾರೆ.

# ಚೆನ್ನೈನಲ್ಲಿ ಮಹಿಳಾ ವಾಲಿಬಾಲ್ ಕ್ರೀಡಾಕೂಟಕ್ಕೆ ಡಿಗ್ರಿ ಕಾಲೇಜು ವಿದ್ಯಾರ್ಥಿನಿಯರು ಆಯ್ಕೆ.

ನೈಜ್ಯ ದೇಸಿ ನ್ಯೂಸ್

**ಡಿಸೆಂಬರ್ 15 ರಿಂದ 19 ರವರೆಗೆ ಎಸ್.ಆರ್.ಎಮ್. ವಿಶ್ವವಿದ್ಯಾಲಯ, ಚೆನ್ನೈ, ತಮಿಳುನಾಡಿನಲ್ಲಿ ನಡೆಯುವ ದಕ್ಷಿಣ ಭಾರತ ಅಂತರ್ ವಿಶ್ವವಿದ್ಯಾಲಯ ಮಹಿಳಾ ವಾಲಿಬಾಲ್ ಕ್ರೀಡಾಕೂಟಕ್ಕೆ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ ತಂಡಕ್ಕೆ ನಗರದ ಡಿಗ್ರಿ ಕಾಲೇಜಿನ ವಿದ್ಯಾರ್ಥಿಗಳು ಆಯ್ಕೆಯಾಗಿದ್ದಾರೆ ಎಂದು ಪ್ರಾಂಶುಪಾಲರಾದ ಪ್ರೊ.ಪಾಂಡು ತಿಳಿಸಿದ್ದಾರೆ.**

**ನಗರದ ಸರ್ಕಾರಿ ಪದವಿ ಕಾಲೇಜಿನಲ್ಲಿ ಅಭ್ಯಾಸ ಮಾಡುತ್ತಿರುವ ಕು.ಸಹನಾ ತಂ.ಪರನಗೌಡ ಬಿ.ಎಸ್.ಸಿ.ಪ್ರಥಮ ಸೆಮಿಸ್ಟರ್, ಕು.ಸಾವಿತ್ರಿ ತಂ.ಹನುಮಂತ ಬಿ.ಎಸ್.ಸಿ.ತೃತೀಯ ಸೆಮಿಸ್ಟರ್ ಇವರು, ಚೆನ್ನೈನಲ್ಲಿ ನಡೆಯುತ್ತಿರುವ ದಕ್ಷಿಣ ಭಾರತ ಅಂತರ್ ವಿಶ್ವವಿದ್ಯಾಲಯದ ಮಹಿಳಾ ವಾಲಿಬಾಲ್ ಕ್ರೀಡಾಕೂಟಕ್ಕೆ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ ತಂಡವನ್ನು ಪ್ರತಿನಿಧಿಸಿ ಕಾಲೇಜಿಗೂ ಹಾಗೂ ನಮ್ಮ ತಾಲೂಕಿಗೂ ಕೀರ್ತಿ ತಂದಿದ್ದಾರೆ. ಇವರಿಗೆ ಕಾಲೇಜಿನ ಅಭಿವೃದ್ಧಿ ಸಮಿತಿಯ ಅಧ್ಯಕ್ಷರು, ಸದಸ್ಯರು, ಪ್ರಾಚಾರ್ಯರು, ಭೋದಕ, ಬೋಧಕೇತರ ಸಿಬ್ಬಂದಿ ವರ್ಗದವರು, ಹಾಗೂ ವಿದ್ಯಾರ್ಥಿ ಬಳಗದಿಂದ ಸನ್ಮಾನಿಸಿ ಗೌರವಿಸಿದರು.**

**ಈ ಸಂದರ್ಭದಲ್ಲಿ: ಹಿರಿಯ ಪ್ರಾಧ್ಯಾಪಕರಾದ ಪ್ರೊ. ಜಾಜಿ ದೇವೇಂದ್ರಪ್ಪ, ಪ್ರೊ.ಪುಷ್ಪ, ಪ್ರೊ.ಇಶ್ರತ್ ಬೇಗಂ, ಪತ್ರಾಂಕಿತ ವ್ಯವಸ್ಥಾಪಕರಾದ ಮೊಹಮ್ಮದ್ ಸಿದ್ದಿಕಿ, ಸಹಾಯಕ ಪ್ರಾಧ್ಯಾಪಕರಾದ ಜಯಶ್ರೀ**




**ಪಾಟೀಲ್, ಉಪನ್ಯಾಸಕರಾದ ರಾಜೇಶ.ಎಂ, ದೈಹಿಕ ಶಿಕ್ಷಣ ವಿಭಾಗದ ಸಂಯೋಜಕರಾದ ಡಾ.ಲವಕುಮಾರ್ ಹಾಗೂ ದೈಹಿಕ ಶಿಕ್ಷಣ ನಿರ್ದೇಶಕರಾದ ಶಿವ.ಕೆ, ಉಪಸ್ಥಿತರಿದ್ದರು.**

# ಕಸಾಪ ದತ್ತಿ ಉಪನ್ಯಾಸ ಮಾಲಿಕೆ

## ಹಾಗೂ ಡಾ ಬಿ ಆರ್ ಅಂಬೇಡ್ಕರ್ ಪರಿನಿರ್ವಾಣ ದಿನಾಚರಣೆ ಮತ್ತು ಕೋಮು ಸೌಹಾರ್ದತೆ ಹಾಗೂ ರಾಷ್ಟ್ರಪ್ರೇಮ ಕಾರ್ಯಕ್ರಮ

ನೈಜ್ಯ ದೇಸಿ ನ್ಯೂಸ್

**ಸಿಂಧನೂರು: ಡಿ 12 ರಂದು ಸಂಜೆ ಬಾಲಕಿಂಮರ ಅಂಬೇಡ್ಕರ್ ವಸತಿ ನಿಲಯ ಸಿಂಧನೂರು ನಡೆದ ಜಿಲ್ಲೆ ಕ.ಸಾ.ಪ ರಾಯಚೂರು ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಘಟಕ ಸಿಂಧನೂರು 2025–26 ನೇ ಸಾಲಿನ ದತ್ತಿ ಉಪನ್ಯಾಸ ಮಾಲಿಕೆ ದಿ.ಶ್ರೀ ಬಸಪ್ಪ ಪಿ.ಸಿಂಧನೂರು ದಿ.ಶ್ರೀ ಚನ್ನನಗೌಡ ಪಾಟೀಲ್ ಸಿಂಧನೂರು, ದತ್ತಿ ಉಪನ್ಯಾಸ ಮಾಲಿಕೆ ಹಾಗೂ ಅಂಬೇಡ್ಕರ್ ಪರಿನಿರ್ವಾಣ ದಿನಾಚರಣೆ ಮತ್ತು ಕೋಮು ಸೌಹಾರ್ದತೆ ಹಾಗೂ ರಾಷ್ಟ್ರಪ್ರೇಮ.**

ಕಾರ್ಯಕ್ರಮವನ್ನು ಉದ್ಘಾಟಕರಾದ ವೆಂಕಟೇಶ್ ಅವರು ಉದ್ಘಾಟಿಸಿದರು ಶ್ರೀ ವೀರೇಶ್ ನಾಯಕ್ ಕನ್ನಾರಿ ಕಸಾಪ ಸದಸ್ಯರು ಸ್ವಾಗತ ಮತ್ತು ದತ್ತಿ ದಾನಿಗಳು ಪರಿಚಯ ಮಾಡಿ ವೇದಿಕೆಗೆ ಮುಖ್ಯ ಅತಿಥಿಗಳನ್ನು ಹೆಗಲುಪಟ್ಟಿ ಮತ್ತು ಪುಸ್ತಕ ಪ್ರತಿ ನೀಡುವುದರ ಮೂಲಕ ಸ್ವಾಗತಿಸಿ ಶ್ರೀ ಭರತ್ ತಂದೆ ನಾಗರಾಜ ಸಿಂಧನೂರು ಶ್ರೀ ಅಂಬರೇಶ್ ಪಾಟೀಲ್ ಬಡಿಬೇಸ್ ,ಸಿಂಧನೂರು ದತ್ತಿ ದಾನಿಗಳ ಪರಿಚಯ ಮಾಡಿದರು. ಕಾರ್ಯಕ್ರಮದ ನಿರೂಪಣೆ ಶ್ರೀ ನಾಗರಾಜ ಅರಳಿಮರ ಗೌರವ ಕಾರ್ಯದರ್ಶಿಗಳು ಕ,ಸಾ,ಪ ಸಿಂಧನೂರು ಇವರು ನಡೆಸಿಕೊಟ್ಟರು. ಪ್ರಾಸ್ತವಿಕ ನುಡಿಯಲ್ಲಿ ಶ್ರೀಮತಿ ಶಾಂತ ಒಳಗಿನಮನಿ ಗೌರವ ಕೋಶಾಧ್ಯಕ್ಷರು ಕ,ಸಾ,ಪ ಸಿಂಧನೂರು ತಾಲೂಕು ಘಟಕ ವತಿಯಿಂದ ನಡೆಸಿದ ವಿವಿಧ ಕಾರ್ಯಕ್ರಗಳ ಬಗ್ಗೆ ಸಂಕ್ಷಿಪ್ತವಾದ ವಿವರಣೆಯನ್ನು ನೀಡಿದರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಹೆಚ್.ಎಫ್. ಮಸ್ಕಿ ಅಧ್ಯಕ್ಷರು ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಸಿಂಧನೂರು ಇವರು ಮಾತನಾಡಿ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಸತತ ಪರಿಶ್ರಮದ ಪ್ರಯತ್ನಗಳ ಫಲಿತಾಂಶ ಸಾಧನೆ ಸಾಧ್ಯವಿದೆ. ಅಕ್ಷರವೆಂಬ ಬೀಜ ಬಿತ್ತಿದ ಭೂಮಿಯು ಎಂದು ಬರುಡಾಗದು.

ಸೃಜನಾತ್ಮಕ ಚಟುವಟಿಕೆ ಪ್ರವೃತ್ತಿಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು ತಿಳಿಸಿದರು. ಶ್ರೀ ಮಮ್ಮದ್ ಅಲಿ ಮುರ್ತುಜಾ ಉಪನ್ಯಾಸಕರು ಬಿ.ಆರ್ ವಿಷಯ ಮಂಡನೆ ನುಡಿಯಲ್ಲಿ ಮಾತಾಡಿ ನಾವೆಲ್ಲರೂ ಭಾರತೀಯರು ಸಮಾನತೆ,ಪ್ರಜಾಸತಾತ್ಮಕ ,ಭಾತೃತ್ವಭಾವನೆ ಸೌಹಾರ್ದತೆ ಮತ್ತು ರಾಷ್ಟ್ರಪ್ರೇಮ ಮಾನವ ಅಳವಡಿಸಿಕೊಳ್ಳಬೇಕು ಅಂದಾಗ ಸಮೃದ್ಧದೇಶ ನಿರ್ಮಾಣವಾಗುತ್ತದೆ. ಕೋಮು ಸಂಘರ್ಷದ ಭಾವನೆ ದೇಶಕ್ಕೆ ಮಾರಕವಾದೆ ಮತ್ತು ಮೂಢತೆಯು ದೇಶವನ್ನು ಹಾಳುಮಾಡುತ್ತದೆ. ತಿಳಿಹೇಳಿದರು.



ನಂತರ ಮೊಹಮ್ಮದ್ ಅಲಿ ಮುರ್ತುಜಾ ಅವರು ವಿಷಯ ಮಂಡಿಸಿ ಸಮಾಜದಲ್ಲಿ ಏಕತೆ, ಸೌಹಾರ್ದತೆ ಮರೆಯಾಗುತ್ತಿದೆ. ಅಸಹಿಷ್ಣುತೆ, ಪೂರ್ವಗ್ರಹ, ಹಿಂಸೆಗಳು ತಾಂಡವವಾಡುತ್ತಿವೆ. ಶಾಂತಿ, ನೆಮ್ಮದಿ ಇಲ್ಲದ ಸಮಾಜ ಎಂದಿಗೂ ಆರ್ಥಿಕವಾಗಿ ಪ್ರಗತಿ ಸಾಧಿಸಲಾರದು. ಇಂದು ಭಾರತದಲ್ಲಿ ಧಾರ್ಮಿಕ ಸಾಮರಸ್ಯದ ಸುಂದರ ಉದಾಹರಣೆಗಳನ್ನು ಹುಡುಕಲು ನಾವು ಸುತ್ತಲೂ ನೋಡಬೇಕಾಗಿತ್ತು. ಅಲ್ಲಿ ವಿವಿಧ ಧರ್ಮಗಳ ಜನರು ಮಾನವೀಯತೆಯ ಮನೋಭಾವದಿಂದ ಒಟ್ಟುಗೂಡುತ್ತಾರೆ, ಭಾರತದ ವೈವಿಧ್ಯತೆ ಮತ್ತು ಸಹಿಷ್ಣುತೆಯ ಶ್ರೀಮಂತ ಪರಂಪರೆಯನ್ನು ಆಚರಿಸುತ್ತಾರೆ. ಎಂದು ತಿಳಿಸಿದರು.. ಮುಖ್ಯ ಅತಿಥಿಗಳಾಗಿ ಶ್ರೀ ಮತಿ ಮಂಜುಳ ಪಾಟೀಲ್ ಮಾಜಿ ನಗರಸಭೆ ಅಧ್ಯಕ್ಷರು ಸಿಂಧನೂರು ಇವರು ಮಕ್ಕಳನ್ನು ಉದ್ದೇಶಿಸಿ ಮಾತನಾಡಿ ಸಾಧನೆಯ ಸಾಧಕರಾಗಿ ಕಲಿಕೆಯೆ ಸಾಧನೆಯ ಮೂಲ ಭದ್ರತೆ ಬುನಾದಿ ಆಗಿದೆ. ಮಕ್ಕಳು ಚೆನ್ನಾಗಿ ವಿದ್ಯಾಭ್ಯಾಸ ಕಲಿತು ಸಾಧಕರ ಸಾಲಿಗೆ ಯುವ ಜನಾಂಗ ಮುಂದೆ ಬರಬೇಕು ಎಂದು ತಿಳಿಸಿದರು. ಮುಖ್ಯ ಅತಿಥಿಗಳಾಗ ಈ ಕಾರ್ಯಕ್ರಮದಲ್ಲಿ ಶ್ರೀ ಗಂಗನಗೌಡ ಪೊಲೀಸ್ ಪಾಟೀಲ್ ಆಡಳಿತ ಅಧಿಕಾರಿಗಳು ಅನ್ವಿತಾ ಕಾಲೇಜ್ ಸಿಂಧನೂರು ಶ್ರೀ ಅಮರೇಶ ಮಾಡಸಿರವಾರ ವರ್ತಕರು ಸಿಂಧನೂರು ಶ್ರೀ ಯಮನಪ್ಪ ಪವಾರ ಉದಯವಾಣಿ ವರದಿಗಾರರು ಸಿಂಧನೂರು ಮುಂತಾದವರು ಭಾಗವಹಿಸಿದ್ದರು. ಶ್ರೀ ವೆಂಕಟೇಶ ನಂಜಲದಿನ್ನಿ ಹಿರಿಯ ಮುಖಂಡರು ಸಿಂಧನೂರು ಶ್ರೀ ಚಂದ್ರಶೇಖರ ಕಗ್ಗೋಡ ನಿವೃತ್ತ ಶಿಕ್ಷಕರು ಸಿಂಧನೂರು. ಶ್ರೀ ಬೀರಪ್ಪ ಸಂಭೋಜಿ ನಿವೃತ್ತ ಶಿಕ್ಷಕರು ಸಿಂಧನೂರು ಶ್ರೀ ಡಾ ಬಸವರಾಜ ಪಿ.ನಾಯಕ ಉಪನ್ಯಾಸಕರು ಸಿಂಧನೂರು ಇನ್ನೀತರರು ಸೇರಿದರು. ಜೊತೆಗೆ ಹಾಸ್ಟೆಲ್ ಸಿಬ್ಬಂದಿ ವರ್ಗದವರುನ್ನು ಸನ್ಮಾನಿಸಿ ಗೌರವಿಸಲಾಯಿತು. ವಂದನಾರ್ಪಣೆಯನ್ನು ಹೆಚ್.ಎಂ.ಶ್ರೀಶೈಲ ಸಿಂಧನೂರು ಕಾರ್ಯಕ್ರಮ ಯಶಸ್ವಿಗೊಳ್ಳಲು ಕಾರಣೀಭೂತರಾದ ವೇದಿಕೆಯ ಎಲ್ಲಾ ಮುಖ್ಯ ಅತಿಥಿಗಳಿಗೆ ಈ ಕಾರ್ಯಕ್ರಮದ ಕೇಂದ್ರ ಬಿಂದುಗಳಾದ ವಿಧ್ಯಾರ್ಥಿಗಳಿಗೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್,ರಾಯಚೂರು. ಮತ್ತು ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಘಟಕ, ಸಿಂಧನೂರು. ವತಿಯಿಂದ ಅಭಿನಂದನೆಗಳೊಂದಿಗೆ ಸಲ್ಲಿಸಿ ವಂದಿಸಿದರು.

## ನೇಮಕಾತಿ ಪ್ರಕಟಣೆ

ಹಿಂದೂಸ್ತಾನ್ ಕಾಪರ್ ನೇಮಕಾತಿ 2025–64 ಸೂಪರ್‌ವೈಸರಿ (ಜೂನಿಯರ್ ಮ್ಯಾನೇಜರ್) ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಹಿಂದೂಸ್ತಾನ್ ಕಾಪರ್ ನೇಮಕಾತಿ 2025: 64 ಸೂಪರ್‌ವೈಸರಿ (ಜೂನಿಯರ್ ಮ್ಯಾನೇಜರ್) ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಹಿಂದೂಸ್ತಾನ್ ಕಾಪರ್ ಲಿಮಿಟೆಡ್ ನವೆಂಬರ್ 2025 ರ ಅಧಿಕೃತ ಅಧಿಸೂಚನೆಯ ಮೂಲಕ ಸೂಪರ್‌ವೈಸರಿ (ಜೂನಿಯರ್ ಮ್ಯಾನೇಜರ್) ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಅಖಿಲ ಭಾರತ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 17–ಡಿಸೆಂಬರ್–2025 ರಂದು ಅಥ–'ವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಪೋಸ್ಟ್ ಹೆಸರು ಸೂಪರ್ವೈಸರಿ (ಜೂನಿಯರ್ ಮ್ಯಾನೇಜರ್) ಖಾಲಿ ಹುದ್ದೆಗಳ ಸಂಖ್ಯೆ 64 ಹುದ್ದೆಗಳು ಅರ್ಹತಾ ಡಿಪ್ಲೊಮಾ, ಸಿಎ, ಐಸಿಡಬ್ಲ್ಯೂಎ, ಪದವಿ, ಎಲ್–ಎಲ್‌ಬಿ, ಬಿಇ/ ಬಿ.ಟೆಕ್, ಪದವಿ, ಎಂಇ/ ಎಂ.ಟೆಕ್, ಪಿಜಿ ಪದವಿ/ ಡಿಪ್ಲೊಮಾ, ಎಂಬಿಎ– https://hindustancopper.com/Page/Career_New Official Website: hindustancopper.com ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 17–ಡಿಸೆಂಬರ್–2025

# ಪ್ರತಿಯೊಬ್ಬರು ರಸ್ತೆ ಸುರಕ್ಷತೆ, ಸೈಬರ್ ವಂಚನೆಗಳಿಂದ ಜಾಗೃತರಾಗಬೇಕು: ಎಸ್ಪಿ ಎಂ.ಪುಟ್ಟಮಾದಯ್ಯ

**ನೈಜ್ಯ ದೆಸೆ ನ್ಯೂಸ್**



**ಜನವರಿ 2025 ರಿಂದ ಇಲ್ಲಿಯವರೆಗೂ ಸುಮಾರು 262 ವ್ಯಕ್ತಿಗಳು ಅಪಘಾತದಲ್ಲಿ ಮರಣ ಹೊಂದಿದ್ದು, 700ಕ್ಕೂ ಅಧಿಕ ಜನರು ತೀವ್ರ ಗಾಯಗೊಂಡಿದ್ದು, ಗಾಯಾಳುಗಳಲ್ಲಿ ಇನ್ನೂ ಕೆಲವರು ಉಳಿಯುತ್ತಾರೋ ಇಲ್ಲವೋ ಅನ್ನುವುದು ನಂಬಿಕೆಯಿಲ್ಲ. ದೇಶದಾದ್ಯಂತ ಪ್ರತಿದಿನ ವಾಹನಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ನಮ್ಮ ರಾಯಚೂರು ಜಿಲ್ಲೆ ಕೂಡ ಹೊರತಾಗಿಲ್ಲ ವಾಹನಗಳ ಸಂಖ್ಯೆ ಹೆಚ್ಚಾಗಿದ್ದು ರಸ್ತೆಗಳು ಮಾತ್ರ ಕಿರಿದಾಗಿರುವುದು ಅಸುರಕ್ಷತೆಯಾಗಿದೆ. ಪ್ರತಿಯೊಬ್ಬರು ರಸ್ತೆ ಸುರಕ್ಷತೆಗಾಗಿ, ಸೈಬರ್ ವಂಚನೆಗಳಿಂದ ಜಾಗೃತರಾಗಬೇಕೆಂದು ಜಿಲ್ಲಾ ಪೊಲೀಸ್ ವ–ರಿಷ್ಠಾಧಿಕಾರಿ ಎಂ.ಪುಟ್ಟಮಾದಯ್ಯ ಹೇಳಿದರು.**

ನಗರದ ಟೌನ್ ಹಾಲ್ ನಲ್ಲಿ ಸಿಂಧನೂರು ಪೊಲೀಸ್ ಉಪವಿಭಾಗದ ವತಿಯಿಂದ ಆಯೋಜಿಸಿದ್ದ ಸೈಬರ್ ಅಪರಾಧಿಗಳ ಮಾಸಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬರು ವಾಹನಗಳಲ್ಲಿ ಸಂಚರಿಸುವಾಗ ಸಾರಿಗೆ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಆದರೆ ನಿಯಮಗಳನ್ನು ಪಾಲಿಸದ ಪರಿಣಾಮ ಮೂರು ಪಟ್ಟು ಹೆಚ್ಚು ವಾಹನಗಳ ಸವಾರರಿಗೆ ದಂಡವನ್ನು ವಿಧಿಸಲಾಗಿದ್ದು, ಬಹುತೇಕ ವಾಹನಗಳಿಗೆ ಇನ್ಸೂರೆನ್ಸ್ ರಿನಿವಲ್ ಮಾಡಿಸಿರುವುದಿಲ್ಲ ಅದರಲ್ಲೂ ಟ್ರಾಕ್ಟರ್ ಗಳಿಗೆ ಇನ್ಸೂರೆನ್ಸ್ ಇಲ್ಲ.

ಮದ್ಯ ಸೇವಿಸಿ, ಹೆಲ್ಮೆಟ್ ಧ–ರಿಸದೆ, ವಾಹನಗಳನ್ನು ಚಲಾಯಿಸುವುದರಿಂದ ಕೆಲವೊಮ್ಮೆ ಓವರ್ ಸ್ಪೀಡ್ ಹಾಗೂ ವಾಹನಗಳ ಚೇಸಿಂಗ್ ಮಾಡುವುದರಿಂದ ಹಲವಾರು ಜನರು ತಮ್ಮ ಪ್ರಾಣವನ್ನೇ ಕಳೆದುಕೊಂಡಿದ್ದಾರೆ. ಇದರಲ್ಲಿ ವಿದ್ಯಾರ್ಥಿ ಯುವಜನರು ಹೊರತಾಗಿಲ್ಲ. ಪರಿಣಾಮ ಹಲವಾರು ಕುಟುಂಬದ ಸದಸ್ಯರು ತಮ್ಮ ಕುಟುಂಬಕ್ಕೆ ದುಡಿಯುವ ಕೈಗಳನ್ನು ಮತ್ತು ಭವಿಷ್ಯದ ಬೆಳಕಾದ ಮಕ್ಕಳನ್ನೇ ಕಳೆದುಕೊಂಡಿದ್ದಾರೆ. ಸೈಬರ್ ಪ್ರಕರಣಗಳಲ್ಲಿ ಬಹುತೇಕವಾಗಿ ವಂಚನೆಗೆ ಒಳಗಾಗುತ್ತಿರುವುದು ಅವಿದ್ಯಾವಂತರಲ್ಲ. ಸೈಬರ್ ಬಲಿಗೆ ವಿದ್ಯಾವಂತರು.

ಹಣಕಾಸು ದುಪ್ಪಟ್ಟಿನ ಆಸೆಗಾಗಿ ಹಾಗೂ ತಾವು ಯಾವುದೋ ಬಹುಮಾನ ಗೆದ್ದಿದ್ದೀರಿ ಎಂದು ಸೈಬರ್ ವಂಚಕರು ಕಳಿಸುವ ಸಂದೇಶದ ಅನುಸಾರ ತಮ್ಮ ಮೊಬೈಲ್ ನಲ್ಲಿ ಬಂದಿರುವ ಒಟಿಪಿ ಹಾಗೂ ಇತರೆ ಸಂದೇಶಗಳನ್ನು ಕ್ಲಿಕ್ ಮಾಡುವುದರಿಂದ ಅದರಲ್ಲೂ ಪ್ರಮುಖವಾಗಿ ಮಹಿಳೆಯರು, ವಿದ್ಯಾರ್ಥಿನಿಯರು ಸಾಮಾಜಿಕ ಜಾಲತಾಣಗಳಲ್ಲಿ ತಮ್ಮ ಪೋಟೋಗಳನ್ನು ಅಪ್ಲೋಡ್ ಮಾಡಿದ ನಂತರ ಸೈಬರ್ ವಂಚಕರು ಇದನ್ನೇ ಬಂಡವಾಳ ಮಾಡಿಕೊಂಡು ಪೋಟೋವನ್ನು ವಿಕೃತಗೊಳಿಸಿ ಮಹಿಳೆಯರನ್ನು ಕುಗ್ಗಿಸಿ ಹಣವನ್ನು ದೋಚುತ್ತಿದ್ದಾರೆ. ಕಾರಣ ರಸ್ತೆ ಸುರಕ್ಷತೆಗಾಗಿ ಹಾಗೂ ಸೈಬರ್ ಅಪರಾಧಿಗಳಿಂದ ಜಾಗೃತರಾಗಿ ಸದೃಢ ಭಾರತ ನಿರ್ಮಾಣ–ಕ್ಕಾಗಿ ಮುಂದಾಗಬೇಕೆಂದು ಕರೆ ನೀಡಿದರು.

ಸೈಬರ್ ಅಪರಾಧಿಗಳ ಮಾಸಾಚರಣೆ ಪ್ರಯುಕ್ತ ಕಾಲೇಜು ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ, ಹಾಗೂ ಭಾಷಣ ಸ್ಪರ್ಧೆ ಏರ್ಪಡಿಸಿ, ಪ್ರಥಮವಾಗಿ ಆಯ್ಕೆಗೊಂಡ ವಿದ್ಯಾರ್ಥಿಗಳಿಗೆ 5 ಸಾವಿರ ನಗದು, ದ್ವಿತೀಯವಾಗಿ ಆಯ್ಕೆಗೊಂಡ ವಿದ್ಯಾರ್ಥಿಗಳಿಗೆ 3 ಸಾವಿರ ನಗದು, ಹಾಗೂ ತೃತೀಯವಾಗಿ ಆಯ್ಕೆಗೊಂಡ ವಿದ್ಯಾರ್ಥಿಗಳಿಗೆ 2 ಸಾವಿರ ನಗದು ಮತ್ತು ಪ್ರಶಂಸೆ ಪತ್ರ ನೀಡಿ, ಇಡೀ ದೇಶದಲ್ಲೇ ಅತ್ಯುತ್ತಮ ಪೊಲೀಸ್ ಠಾಣೆ ಪ್ರಶಸ್ತಿ ಪಡೆದ ಕವಿತಾಳ ಪೊಲೀಸ್ ಠಾಣೆಯ ಪಿಎಸ್ಐ ಗುರುಚಂದ ಅವ–ರಿಗೆ ಬಹುಮಾನವನ್ನು ವಿತರಿಸಲಾಯಿತು. ಈ ವೇಳೆ: ತಹಶೀಲ್ದಾರ್ ಅರುಣ್ ಕುಮಾರ್ ದೇಸಾಯಿ, ತಾಲೂಕು ಪಂಚಾಯತಿ ಕಾರ್ಯ ನಿರ್ವಾಹಕ ಚಂದ್ರಶೇಖರ್, ಡಿವೈಎಸ್ಪಿ ಚಂದ್ರಶೇಖರ್ ಜಿ ಪೌರಾಯುಕ್ತ ಪಾಂಡುರಂಗ ಇಟಗಿ, ಖಾಸಗಿ ಶಿಕ್ಷಣ ಸಂಸ್ಥೆ ಮುಖ್ಯಸ್ಥರಾದ ಆರ್.ಸಿ.ಪಾಟೀಲ್, ಸೇರಿದಂತೆ ಸಿಪಿಐ ವೀರಾರೆಡ್ಡಿ, ತುರ್ವಿಹಾಳ ಪಿಎಸ್ಐ ಸುಜಾತ, ಮಾನ್ವಿ ಪಿಎಸ್ಐ ಕೆಂಚರೆಡ್ಡಿ, ಬಳಗಾನೂರು ಪಿಎಸ್ಐ ಯ–ರಿಯಪ್ಪ, ಪೊಲೀಸ್ ಸಿಬ್ಬಂದಿಗಳು ಹಾಗೂ ಕಾಲೇಜಿನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

## 1310ನೇ ದಿನಕ್ಕೆ ಕಾಲಿಟ್ಟ ಎಮ್ಸ್ ಅನಿರ್ದಿಷ್ಟ ಧರಣಿ ಸತ್ಯಾಗ್ರಹ .

**ನೈಜ್ಯ ದೆಸೆ ನ್ಯೂಸ್**

**ಲಿಂಗಸಗೂರು: ಕರ್ನಾಟಕ ರಾಜ್ಯ ಸರ್ಕಾರದ ಮಹತ್ವದ ಶಿಫಾರಸ್ಸು ಪತ್ರಗಳಿಗೆ ಗೌರವ ನೀಡಿ, ಸುಧೀರ್ಘವಾಗಿ ನಡೆಯುತ್ತಿರುವ ಅನಿರ್ದಿಷ್ಟ ಧರಣಿ ಸತ್ಯಾಗ್ರಹಕ್ಕೆ ಸ್ಪಂದಿಸಿ ಶೀಘ್ರದಲ್ಲಿಯೇ ರಾಯಚೂರಿಗೆ ಏಮ್ಸ್ ಆರೋಗ್ಯ ಸಂಸ್ಥೆಯನ್ನು ಮಂಜೂರು ಮಾಡಲೇಬೇಕೆಂದು ಕೇಂದ್ರ ಸರಕಾರವನ್ನು ಒತ್ತಾಯಿಸುತ್ತಾ.**




ನಡೆಸುತ್ತಿರುವ ಎಮ್ಸ್ ಹೋರಾಟ ಸಮಿತಿ ಎಮ್ಸ್ ಅನಿರ್ದಿಷ್ಟ ಧರಣಿ ಸತ್ಯಾಗ್ರಹ ಇಂದಿಗೆ 1310 ನೇ ದಿನಕ್ಕೆ ಕಾಲಿಟ್ಟಿದ್ದು ಎಡೆಬಿಡದೆ ಇಂದು ನಡೆದ ಧರಣಿ ಸತ್ಯಾಗ್ರಹದಲ್ಲಿ ಪ್ರಧಾನ ಸಂಚಾಲಕರಾದ ಡಾ. ಬಸವರಾಜ್ ಕಳಸ, ಅಶೋಕ್ ಕುಮಾರ್ ಜೈನ್, ಎಸ್. ತಿಮ್ಮಾರೆಡ್ಡಿ, ಶರಣಪ್ಪ ಅಸ್ಕಿಹಾಳ್, ಎಸ್. ಹನುಮಂತಪ್ಪ , ವೆಂಕಟರೆಡ್ಡಿ ದಿನ್ನಿ, ಬಾಬು ಮೇಧ, ಜಗದೀಶ್ ಪೂರತಿಪ್ಲಿ, ಪ್ರಸನ್ನ ಆಲಮ್ಪಲ್ಲಿ, ಮಲ್ಲಿಕಾರ್ಜುನ, ಶಾಂತಗೌಡ ಸುಬೇದಾರ್, ದೇವೇಂದ್ರಪ್ಪ ಧನ್ವಂತರಿ ಮುಂತಾದವರು ಭಾಗವಹಿಸಿದ್ದರು.

## ವಸತಿ ಶಾಲೆಯಲ್ಲಿ ವಿವಿಧ ಕಾಯ್ದೆಗಳ ಅರಿವು ಕಾರ್ಯಕ್ರಮ



**ನೈಜ್ಯ ದೆಸೆ ನ್ಯೂಸ್**

**ರಾಯಚೂರು: ಡಿಸೆಂಬರ್ 12 (ಕರ್ನಾಟಕ ವಾರ್ತೆ): ಇಲ್ಲಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಕ್ಷಣ ಇಲಾಖೆ, ಅರಣ್ಯ ಇಲಾಖೆ ಹಾಗೂ ಜಿಲ್ಲಾ ಮಹಿಳಾ ಸಬಲೀಕರಣ ಘಟಕದ ವತಿಯಿಂದ ಸಿರವಾರ ತಾಲೂಕಿನ ನವಲಕಲ್ ಶ್ರೀ ಮತಿ ಇಂದಿರಾಗಾಂಧಿ ವಸತಿ ಶಾಲೆಯಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಯೋಜನೆಗಳು ಮತ್ತು ಕಾಯ್ದೆಗಳ ಕುರಿತು ಜಾಗೃತಿ ಕಾರ್ಯಕ್ರಮವು ಇತ್ತೀಚೆಗೆ ನಡೆಯಿತು.**


ಈ ವೇಳೆ ಮಿಷನ್ ಶಕ್ತಿ ಯೋಜನೆಯ ಜಿಲ್ಲಾ ಸಂಯೋಜಕರಾದ ಬಾವಸಲಿ ಅವರು ಮಾತನಾಡಿ, ಲೈಂಗಿಕ ಹಿಂಸೆಯಿಂದ ಮಹಿಳೆಯರನ್ನು ಸಂರಕ್ಷಣೆ ಮಾಡುವುದು ಪ್ರತಿಯೊಬ್ಬರ ಜವಾಬ್ದಾ–ರಿಯಾಗಿದೆ. ಸಮಾಜದಲ್ಲಿ ಹೆಣ್ಣು–ಗಂಡು ಎಂಬ ಭೇದ–ಭಾವ ದೂರುವಾಗಬೇಕು. ಗಂಡು ಹೆಣ್ಣು ಇಬ್ಬರು ಸಮಾನರು ಎನ್ನುವ ಭಾವನೆಯು ಪ್ರತಿಯೊಬ್ಬರಲ್ಲೂ ಬರಬೇಕು. ಸಾಮಾಜಿಕ ಪಿಡುಗುಗಳಾದ ಬಾಲ್ಯ ವಿವಾಹ, ಬಾಲ ಕಾರ್ಮಿಕ ಪದ್ಧತಿ ದೇವದಾಸಿ ಪದ್ಧತಿ ಇವೆಲ್ಲ ದೂರುವಾಗಬೇಕೆಂದರು. ಬಾಲ್ಯ ವಿವಾಹ ವಿರುದ್ಧ ಕಠಿಣ ಕಾನೂನು ಇದೆ. 'ಮೊಬೈಲ್ ಬಿಡಿ ಪುಸ್ತಕ ಹಿಡಿ' ಎನ್ನುವ ವಿಧಾನ ಅನುಸರಿಸಿದಲ್ಲಿ ನಮ್ಮ ಜೀವನವು ಉತ್ತಮವಾಗಿ ರೂಪುಗೊಳ್ಳಲು ಸಾಧ್ಯವಿದೆ. ನಿರಂತರ ಪ್ರಯತ್ನವೆ ಯಶಸ್ಸಿನ ಗುಟ್ಟು ಆಗಿದೆ.

ನೊಂದ ಮಹಿಳೆಯರು ಹಾಗೂ ವಿದ್ಯಾರ್ಥಿನಿಯರಿಗೆ 181 ಮಹಿಳಾ ಸಹಾಯವಾಣಿ, 1098 ಮಕ್ಕಳ ಸಹಾಯವಾಣಿ ಕುರಿತು ಸವಿಸ್ತಾರವಾಗಿ ಮಾಹಿತಿ ನೀಡಿದರು. ಇದೇ ಸಂದರ್ಭದಲ್ಲಿ ಶ್ರೀ ಮತಿ ಇಂದಿರಾ ಗಾಂಧಿ ವಸತಿ ಶಾಲೆಯ ಪ್ರಾಂಶುಪಾಲರಾದ ಲಿಂಗರಾಜ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಹಿರಿಯ ಮೇಲ್ವಿಚಾರಕರಾದ ನಾಗಮ್ಮ. ಹೆಚ್ ಸೇರಿದಂತೆ ವಸತಿ ಶಾಲೆಯ ಸಹ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಇದ್ದರು.

## ಶಾಲಾ ಕಾಲೇಜಿನ ಮಕ್ಕಳಿಗೆ ನೋಟ್ ಬುಕ್, ಪೆನ್, ಪೆನ್ಸಿಲ್ ವಿತರಿಸಿ ಮಾನವೀಯತೆ ಮೆರೆದ ಕರವೇ.

**ನೈಜ್ಯ ದೆಸೆ ನ್ಯೂಸ್**

**ಕರ್ನಾಟಕ ರಕ್ಷಣಾ ವೇದಿಕೆ ಶಿವರಾಮೇಗೌಡ ಬಣದ ವತಿಯಿಂದ ತಾಲೂಕಿನ ಅಂಬಾಮಠ, ಸುಲ್ತಾನಪುರ, ಸಾಲುಗುಂದ, ಸುಕಾಲಪೇಟೆ, ಸೇರಿದಂತೆ ಇನ್ನಿತರೆ ಸರ್ಕಾರಿ ಶಾಲೆ ಮತ್ತು ಕಾಲೇಜಿನ ವಿದ್ಯಾರ್ಥಿಗಳಿಗೆ ನೋಟ್ ಬುಕ್, ಪೆನ್, ಪೆನ್ಸಿಲ್, ಸೇರಿದಂತೆ ಇನ್ನಿತರೆ ಸಾಮಗ್ರಿಗಳನ್ನು ವಿದ್ಯಾರ್ಥಿಗಳಿಗೆ ಉಚಿತವಾಗಿ ನೀಡುವುದರ ಮೂಲಕ ವಿದ್ಯಾರ್ಥಿಗಳ ಜೀವನ ದೀಪದಂತೆ ಬೆಳಕಾಗಲಿ ಎಂದು ಹಾರೈಸಿದರು.**



ರಕ್ಷಣಾ ವೇದಿಕೆ ವತಿಯಿಂದ ನೋಟ್ ಬುಕ್, ಪೆನ್ನು, ಪೆನ್ಸಿಲ್, ಕೊಟ್ಟಿರುವುದು ನಿಜಕ್ಕೂ ಸಾರ್ಥಕವಾದ ಕೆಲಸ, ಇದು ಇತರರಿಗೆ ಮಾದರಿಯಾಗಿದೆ. ಕರ್ನಾಟಕ ರಕ್ಷಣಾ ವೇದಿಕೆ ತಾಲೂಕು ಅಧ್ಯಕ್ಷರಾದ ಸುರೇಶ್ ಗೊಬ್ಬರಕಲ್, ಸೇರಿದಂತೆ ತಾಲೂಕು, ನಗರ ಮತ್ತು ಗ್ರಾಮ ಘಟಕದ ಎಲ್ಲಾ ಅಧ್ಯಕ್ಷರು, ಪದಾಧಿಕಾರಿಗಳು, ಉಪಸ್ಥಿತರಿದ್ದರು.

## ಆಟೋ ಸ್ಟ್ಯಾಂಡ್‌ಗಳಿಗೆ ಅನುಕೂಲ ಕಲ್ಪಿಸಲು ಒತ್ತಾಯಿಸಿ ಪೌರಾಯುಕ್ತರಿಗೆ ಮನವಿ

**ನೈಜ್ಯ ದೆಸೆ ನ್ಯೂಸ್**




**ಸಿಂಧನೂರು: ನಗರದ ವಿವಿಧ ಕಡೆ ಆಟೋ ಸ್ಟ್ಯಾಂಡ್‌ಗಳಿಗೆ ಅನುಕೂಲ ಕಲ್ಪಿಸಿ, ಸಾರ್ವಜನಿಕ–ರಿಗೆ ಸಾರಿಗೆ ಸೇವೆ ಒದಗಿಸಲು ಸೂಕ್ತ ಕ್ರಮ ಜರುಗಿಸುವಂತೆ ಒತ್ತಾಯಿಸಿ ಭಗತ್‌ಸಿಂಗ್ ಆಟೋ ಚಾಲಕರ ಸಂಘ ತಾಲೂಕು ಸಮಿತಿ ವತಿಯಿಂದ ನಗರಸಭೆ ಪೌರಾಯುಕ್ತ–ರಿಗೆ ಗುರುವಾರ ಮನವಿ ಸಲ್ಲಿಸಲಾಯಿತು. ಸಿಂಧನೂರು ಜಿಲ್ಲೆಯಲ್ಲೇ ಪ್ರಮುಖ ನಗರವಾಗಿದ್ದು, ವಾಣಿಜ್ಯ ಕೇಂದ್ರವಾಗಿರುತ್ತದೆ.**

ದಿನವೂ ನಗರಕ್ಕೆ ಬಂದು–ಹೋಗುವವರ ಸಂಖ್ಯೆ ಹಾಗೂ ಸ್ಥಳೀಯ ಪ್ರಯಾಣಿಕರ ಸಂಖ್ಯೆ ಹೆಚ್ಚಿರುತ್ತದೆ. ಜನಸಾಮಾನ್ಯರಿಗೆ ಸ್ಥಳೀಯವಾಗಿ ಸಾರಿಗೆ ಸೇವೆ ಒದಗಿಸುವಲ್ಲಿ ಸ್ಥಳೀಯ ಆಟೋ ಚಾಲಕರು ಕಾರ್ಯನಿರ್ವಹಿಸುತ್ತಿದ್ದಾರೆ. ಹೆಚ್ಚುತ್ತಿರುವ ಜನದಟ್ಟಣೆಯಿಂದಾಗಿ ಆಟೋ ಚಾಲಕರು ನಗರದ ಹಲವು ಕಡೆ ಆಟೋ ನಿಲುಗಡೆ ಮಾಡಲು ಸ್ಟಾ?ಯಂಡ್ ಇಲ್ಲದೇ ಇರುವುದ–ರಿಂದ ಸಮಸ್ಯೆ ಎದುರಿಸುತ್ತಿದ್ದಾರೆ. ಇದರಿಂದ ಸ್ಥಳೀಯ ಪ್ರಯಾಣಿಕರೂ ತೊಂದರೆಯಾಗುತ್ತಿದೆ. ಹಾಗಾಗಿ ನಗರದ ಕುಷ್ಟಗಿ ಮಾರ್ಗದ ಬಸವ ವೃತ್ತ, ಬಸ್ ನಿಲ್ದಾಣದ ಬಳಿಯಿರುವ ಸಹನಾ ಆಸ್ಪತ್ರೆಗೆ ಹೋಗುವ ಮಾರ್ಗದ ರಸ್ತೆಯಲ್ಲಿ ಆಟೋ ಸ್ಟ್ಯಾಂಡ್‌ಗೆ ಅನುಕೂಲ ಕಲ್ಪಿಸಿ ನಾಮಫಲಕ ಅಳವಡಿಸಬೇಕು ಹಾಗೂ ನಗರದ ಬಸ್ ನಿಲ್ದಾಣಕ್ಕೆ ಹೊಂದಿಕೊಂಡಿರುವ ನಗರಸಭೆ ಜಾಗೆಯಲ್ಲಿ ಆಟೋ ಸ್ಟ್ಯಾಂಡ್‌ಗೆ ಅವಕಾಶ ಒದಗಿಸಿ, ಗ್ರಿಲ್ ವ್ಯವಸ್ಥೆ ಮಾಡುವ ಮೂಲಕ ಸರದಿಯಲ್ಲಿ ಆಟೋ ನಿಲ್ಲಲು ಅನುಕೂಲ ಮಾಡಿಕೊಡಬೇಕು ಎಂದು ಸಂಘದಿಂದ ಮನವಿ ಮಾಡಿದ್ದಾರೆ.

'ಮೂತ್ರಾಲಯ ನಿರ್ಮಿಸಿ' ಸುಕಾಲಪೇಟೆ ರಸ್ತೆ ಮಾರ್ಗದಲ್ಲಿ ಒಂದೇ ಒಂದು ಸಾರ್ವಜನಿಕ ಮೂತ್ರಾಲಯ ಅಥ–'ವಾ ಶೌಚಾಲಯ ಇರುವುದಿಲ್ಲ. ಇದರಿಂದ ಸಾರ್ವಜನಿಕರು ಸಮಸ್ಯೆ ಅನುಭವಿಸುತ್ತಿದ್ದಾರೆ. ಇನ್ನೂ ಮಂಗಳವಾರ ಸಂತೆಯ ದಿನ ದೇವರಾಜು ಅರಸು ಮಾರುಕಟ್ಟೆ ಹಾಗೂ ಸುಕಾಲಪೇಟೆ ರಸ್ತೆ ಮಾರ್ಗದಲ್ಲಿ ಜನದಟ್ಟಣೆಯಾಗುವುದರಿಂದ ಕನಿಷ್ಠ ಪಕ್ಷ ಮೂತ್ರ ವಿಸರ್ಜನೆ ಮಾಡಲು ಯಾವುದೇ ವ್ಯವಸ್ಥೆ ಇರುವುದಿಲ್ಲ. ಇದರಿಂದ ಸಂತೆಗೆ ಬರುವ ಮಹಿಳೆಯರು, ಮಹಿಳಾ ವ್ಯಾಪಾರಿಗಳು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಹಾಗಾಗಿ ಪಶು ಆಸ್ಪತ್ರೆ ಕಾಂಪೌಂಡ್‌ಗೆ ಹೊಂದಿಕೊಂಡು ಇರುವ ರಸ್ತೆ ಬದಿಯ ಚರಂಡಿ, ಮಣ್ಣಿನಿಂದ ಮುಚ್ಚಿಹೋಗಿದ್ದು, ಈ ಚರಂಡಿಯ ಹೂಳನ್ನು ವಿಲೇವಾರಿ ಮಾಡಿ, ದುರಸ್ತಿಗೊಳಿಸಿ, ಈ ಪ್ರದೇಶದಲ್ಲಿ ಸಾರ್ವಜನಿಕ ಮೂತ್ರಾಲಯ ಸೌಲಭ್ಯ ಕಲ್ಪಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಿದ್ದಾರೆ. ಈ ಸಂದರ್ಭದಲ್ಲಿ ಗೌರವ ಅಧ್ಯಕ್ಷ ನಾಗರಾಜ ಪೂಜಾರ್, ಅಧ್ಯಕ್ಷ ಬಸವರಾಜ ಕೊಂಡೆ, ಉಪಾಧ್ಯಕ್ಷ ನಾಗಪ್ಪ ಬಿಂಗಿ, ಕಾರ್ಯದರ್ಶಿ ಶೇಕ್ಷಾವಲಿ, ಖಜಾಂಚಿ ಖಾಜಾಹುಸೇನ್ ಸೇರಿದಂತೆ ಸಂಘದ ಪದಾಧಿಕಾರಿಗಳು, ಆಟೋ ಚಾಲಕರು ಇದ್ದರು.

# ಶಿಕ್ಷಣ ಮತ್ತು ಸಂಸ್ಕಾರ ಹೆಣ್ಣಿಗೆ ಎರಡು ಕಣ್ಣುಗಳಿದ್ದಂತೆ– ವಿಶ್ವನಾಥ ಹೂಗಾರ

**ನೈಜ್ಯ ದೆಸೆ ನ್ಯೂಸ್**



**ಗುರುಗುಂಟಾ: ಸಮಾಜ ಹೆಣ್ಣನ್ನು ಸಂಸ್ಕಾರವೆಂಬ ಚೌಕಟ್ಟಿನಲ್ಲಿ ಬಂಧಿಸಿ ಅವಳ ಕನಸನ್ನ ಬದುಕಿನ ಗುರಿಯನ್ನು ಕಸಿದುಕೊಳ್ಳುತ್ತಾ ಬರುತ್ತಿದೆ ಆದರೆ ನಿಜವಾದ ಸಂಸ್ಕಾರ ಎನ್ನುವುದು ತಡೆಗೋಡೆಗಳನ್ನು ಕಟ್ಟುವುದಲ್ಲ ಅವಳ ಜೀವನಕ್ಕೆ ಸಮಾನತೆ ಮತ್ತು ಸ್ವಾತಂತ್ರ್ಯದ ಅವಕಾಶಗಳನ್ನ ಕಲ್ಪಿಸುವುದಾಗಿದೆ ಹಿಂದಿನ ಆಧುನಿಕ ಜೀವನದಲ್ಲಿ ಹೆಣ್ಣಿಗೆ ಶಿಕ್ಷಣ ಜೊತೆಗೆ ಅವಕಾಶಗಳು ಮಹತ್ವವಾಗಿದ್ದು ಏಕೆಂದರೆ ಮಹಿಳೆಯರು ಶಿಕ್ಷಣ ಮತ್ತು ಸಂಸ್ಕಾರದಿಂದ ಮಾತ್ರ ಸಶಕ್ತಬದುಕನ್ನ ರೂಪಿಸಿಕೊಳ್ಳಲು ಸಾಧ್ಯ, ಅದ–ರಿಂದ ಶಿಕ್ಷಣ ಮತ್ತು ಸಂಸ್ಕಾರ ಹೆಣ್ಣಿಗೆ ಎರಡು ಕಣ್ಣುಗಳಿದ್ದಂತೆ ಎಂದು ನ್ಯೂಸ್ –18 ಎರಡು ಎಂದು ಜಿಲ್ಲಾ ವರದಿಗಾರರ ಶ್ರೀ ವಿಶ್ವನಾಥ್ ಹೂಗಾರ ವಿದ್ಯಾರ್ಥಿನಿಯರಿಗೆ ಕಿವಿ ಮಾತು ಹೇಳಿದರು**

ಪಟ್ಟಣದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ಡಾ. ಸುಧಾ ಮೂರ್ತಿ ಇನ್ಫೋ ಮಹಿಳಾ ಪದವಿ ಕಾಲೇಜಿನ 2026–27ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ 7 ನೇ ದಿನದ ವಿಶೇಷ ಶಿಬಿರದ ಸಮಾರೋಪ ಸಮಾರಂಭವು ಸುಕ್ಷೇತ್ರ ಅಮರೇಶ್ವರ ಬ್ರಹನ್ಮಠ ದೇವರಭೂಪುರದಲ್ಲಿ ನಡೆಯಿತು ಈ ಸಮಾರಂಭದಲ್ಲಿ ವಿಶೇಷ ಉಪನ್ಯಾಸ ನೀಡಲು ಆಗಮಿಸಿದ್ದ ಶ್ರೀ ವಿಶ್ವನಾಥ ಹೂಗಾರ್ ಅವರು "ಹೆಣ್ಣಿಗೆ ಶಿಕ್ಷಣ ಒಂದೇ ಸಾಕೆ ಸಂಸ್ಕಾರವು ಬೇಕೆ" ಎನ್ನುವ ಉಪನ್ಯಾಸದಲ್ಲಿ ಶಿಕ್ಷಣವಿಲ್ಲದ ಹೆಣ್ಣು ಮಗಳ ಜೀವನ ದಿಕ್ಕಿಲ್ಲದ ದೀಪದಂತೆ ಆದ್ದರಿಂದ ಶಿಕ್ಷಣ ಅವಳಿಗೆ ಬದುಕು ಕೊಟ್ಟರೆ ಸಂಸ್ಕಾರ ಗೌರವ ಹೆಚ್ಚಾಗುವಂತೆ ಮಾಡುತ್ತದೆ ಹಾಗಾಗಿ ಹೆಣ್ಣುಮಕ್ಕಳ ಶಿಕ್ಷಣ ಮತ್ತು ಸಂಸ್ಕಾರವನ್ನು ಜೀವನದಕ್ಕೂ ಅಳವಡಿಸಿಕೊಂಡು ಆದರ್ಶ ಬದುಕು ನಿರ್ಮಿಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ತಿಳಿ ಹೇಳಿದರು.

ಈ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ವಹಿಸಿದ ಶ್ರೀ ಅಮರೇಶ್ವರ ಗುರು ಷ.ಬ್ರ ಶ್ರೀ ಗಜಗಂಡ ಶಿವಾಚಾರ್ಯ ಮಹಾಸ್ವಾಮಿಜಿಯವರು ತಮ್ಮ ಆಶೀರ್ವಚನದಲ್ಲಿ ಶಿಕ್ಷಣ ಮತ್ತು ಸಂಸ್ಕಾರ ಎರಡು ಮೂಲ ಭಾರತೀಯ ಸಂಸ್ಕೃತಿ ಯ ಪರಂಪರೆ ಯಾಗಿದೆ ಶಿಕ್ಷಣ ಅವಳ ಬದುಕಿಗೆ ಬೆಳಕಾದರೆ ಸಂಸ್ಕಾರ ಅವಳ ಹೃದಯಕ್ಕೆ ಬೆಳಕಾಗುತ್ತದೆ ಇವೆರಡು ಇದ್ದಾಗ ಅವಳು ಸಮಾಜದ ಮತ್ತು ಕುಟುಂಬದ ಶಕ್ತಿಯಾಗಲು ಸಾಧ್ಯ. ಆದರಿಂದ ನಿಮ್ಮ ಬಾಳಲ್ಲಿ ಇವೆರಡು ಮುಖ್ಯವಾಗಲಿ ಎಂದರು. ಮತ್ತಷ್ಟು ಬೆಳಕು ಚೆಲ್ಲುತ್ತ ಜ್ಞಾನ ಮತ್ತು ಸಂಸ್ಕಾರ ಎರಡು ಪಕ್ಷಿಯ ರೆಕ್ಕೆಗಳಿದ್ದಂತೆ ಎರಡು ಇದ್ದಾಗ ಮಾತ್ರ ಹೆಣ್ಣಿನ ವ್ಯಕ್ತಿತ್ವ ಪರಿಪೂರ್ಣತೆ ಹೊಂದಿ ಬೆಳಕು ನೀಡುವ ಶಕ್ತಿಯಾಗುತ್ತಿರಿ ಎಂದು ಆಶೀರ್ವದಿಸಿದರು ಡಾಕ್ಟರ್ ಸುಧಾ ಮೂರ್ತಿ ಇನ್ಫೋ ಮಹಿಳಾ ಕಾಲೇಜಿನ ಈ ಕಾರ್ಯಕ್ರಮ ನಮ್ಮ ಶ್ರೀ ಮಠದಲ್ಲಿ ನಡೆದದ್ದು ಮತ್ತು ನೂರಾರು ವಿದ್ಯಾರ್ಥಿಗಳು ಭಾಗಿಯಾದದ್ದು ನೋಡಿ ಖುಷಿಯಾಯಿತು ಎಂದರು

ಪ್ರಾಸ್ತವಿಕವಾಗಿ ಮಾತನಾಡಿದ ಕಾಲೇಜಿನ ಅರ್ಥಶಾಸ್ತ್ರದ ಅರ್ಥಶಾಸ್ತ್ರದ ಉಪನ್ಯಾಸಕರಾದ ಮಾರುತಿ. ಎಸ್ ಅವರು ಮಾತನಾಡಿ ಶ್ರೀ ಮಠದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಗುರುಗಳ ಮುಂದೆ ಮಾತನಾಡಲು ಅವಕಾಶ ದೊರೆತಿರುವುದು ನನ್ನ ಸೌಭಾಗ್ಯ ಧನ್ಯತಾ ಭಾವ ಮೂಡಿಸಿತು ಎಂದರು ಈ ಶಿಬಿರವು ನಮಗೆ ಕೇವಲ ಕೆಲಸ ಮಾಡಲು ಕಲಿಸಲಿಲ್ಲ ಸಮಾಜವನ್ನು ನೋಡುವ ದೃಷ್ಟಿ ಹೆಣ್ಣು ಮಕ್ಕಳ ಶಿಕ್ಷಣದ ಮಹತ್ವ ಮತ್ತು ಆರೋಗ್ಯ ಮಾನವೀಯ ಮೌಲ್ಯಗಳನ್ನು ಬಿತ್ತಿತು. ಎಂದರು ಕೊನೆಗೆ ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಸ್ಥಾಪಕರಾದ ೦ಇಇ ಶ್ರೀ ಕೆಂಚಪ್ಪ ಬಾವಿಮನಿಯವರು ಮಾತನಾಡಿ ಹೆಣ್ಣು ಮಕ್ಕಳ ಶಿಕ್ಷಣದಿಂದ ವಂಚಿತರಾಗಬಾರದು ಎನ್ನುವ ಏಕ ಉದ್ದೇಶದಿಂದ ಪ್ರಾರಂಭವಾದ ಈ ಕಾಲೇಜು ಇವತ್ತು ಎಲ್ಲರ ಸಹಕಾರದಿಂದ ಹಿರಿಯರ ಆಶೀರ್ವಾದದಿಂದ ಅತಿ ಹೆಚ್ಚು ವಿದ್ಯಾರ್ಥಿನಿಯರು ಕಲಿಯುವ ಸಂಸ್ಥೆಯಾಗಿದ್ದು ವಯಕ್ತಿಕವಾಗಿ ಖುಷಿ ತಂದಿದೆ ಡಾ. ಸುಧಾ ಮೂರ್ತಿಯವರ ಆದ–'ರ್ಶ ಸರಳತೆ ಸೇವಾಮನೋಭಾವನೆಯಂತಹ ಗುಣಗಳನ್ನು ನೀವೆಲ್ಲರೂ ಅಳವಡಿಸಿಕೊಂಡು ಹೆತ್ತವರಿಗೆ ಮತ್ತು ಸಂಸ್ಥೆಗೆ ಕೀರ್ತಿ ತರುವಂತರಾಗಿ ಎಂದು ಭಾವನಾತ್ಮಕವಾಗಿ ಹೇಳಿದರು ಎನ್–ಎಸ್‌ಎಸ್ ಶಿಬಿರಾರ್ಥಿ ಕಿತ್ತೂರು ರಾಣಿ ಚೆನ್ನಮ್ಮ ತಂಡದವರು ನಿರೂಪಿಸಿದರು ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಅರ್ಪಿತ ಕೆ ಬಾವಿಮನಿ ಆಡಳಿತ ಅಧಿಕಾರಿಗಳಾದ ವಿನೋದ್ ಗುಡಿಮನಿ ಪ್ರಾಚಾರ್ಯರಾದ ಶ್ರೀ ರಮೇಶ ವೆಂಕಟಪುರ ಉಪಸ್ಥಿತರಿದ್ದರು ಕಾಲೇಜಿನ ಉಪನ್ಯಾಸಕರು ವಿದ್ಯಾರ್ಥಿನಿಯರು ಸಿಬ್ಬಂದಿ ವರ್ಗದವರು ಮತ್ತು ಗ್ರಾಮಸ್ಥರು ಹಾಜರಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಎಂ.ಎಸ್. ಪ್ರಸೂತಿ ತಂತ್ರ ಮತ್ತು ಸ್ತ್ರೀ ರೋಗ

ಎಂ.ಎಸ್. (ಆಯುರ್ವೇದ) ಪ್ರಸೂತಿ ತಂತ್ರ ಮತ್ತು ಸ್ತ್ರೀ ರೋಗವು ಆಯುರ್ವೇದ ಸ್ತ್ರೀರೋಗ ಶಾಸ್ತ್ರ (ಸ್ತ್ರೀ ರೋಗ) ಮತ್ತು ಪ್ರಸೂತಿಶಾಸ್ತ್ರ (ಪ್ರಸೂತಿ ತಂತ್ರ) ದ ಮೇಲೆ ಕೇಂದ್ರೀಕರಿಸುವ 3 ವರ್ಷಗಳ ಪಿಜಿ ಕೋರ್ಸ್ ಆಗಿದ್ದು, ಸಾಂಪ್ರದಾಯಿಕ ಆಯುರ್ವೇದ ವಿಧಾನಗಳು ಮತ್ತು ಆಧುನಿಕ ಒಳನೋಟಗಳನ್ನು ಬಳಸಿಕೊಂಡು ಮಹಿಳೆಯರ ಸಂತಾನೋತ್ಪತ್ತಿ ಆರೋಗ್ಯ, ಗರ್ಭಧಾರಣೆ, ಹೆರಿಗೆ, ಪ್ರಸವಾನಂತರದ ಆರೈಕೆ ಮತ್ತು ಋತುಬಂಧವನ್ನು ಒಳಗೊಂಡಿದೆ. ಪ್ರಮುಖ ವಿಷಯಗಳಲ್ಲಿ ಗರ್ಭಗರ್ಭಿಣಿ ವಿಜ್ಞಾನಂ, ಪ್ರಸವ ವಿಜ್ಞಾನ, ಸ್ತ್ರೀ ರೋಗಗಳ ನಿರ್ವಹಣೆ, ಪ್ರಸವಪೂರ್ವ/ಪ್ರಸವಪೂರ್ವ ಆರೈಕೆ ಮತ್ತು ಪ್ರಾಯೋಗಿಕ ಕ್ಲಿನಿಕಲ್ ತರಬೇತಿ ಸೇರಿವೆ. ಸೂತಿ ತಂತ್ರ ಮತ್ತು ಸ್ತ್ರೀ ರೋಗವು ಸಮಗ್ರ ಮತ್ತು ಅವಿಭಾಜ್ಯ ವಿಷಯವಾಗಿದ್ದು, ಇದು ವಿದ್ಯಾರ್ಥಿಗಳನ್ನು ಅವರ ಜೀವನದುದ್ದಕ್ಕೂ ಮಹಿಳೆಯರ ಪರಿಣಾಮಕಾರಿ ಆರೈಕೆಗೆ ಅಗತ್ಯವಾದ ಜ್ಞಾನ ಮತ್ತು ಕೌಶಲ್ಯಗಳೊಂದಿಗೆ ಸಜ್ಜುಗೊಳಿಸುತ್ತದೆ ಮತ್ತು ಗರ್ಭಧಾರಣೆಯ ಸಂತಾನೋತ್ಪತ್ತಿ ಆರೋಗ್ಯ ಮತ್ತು ನಿರ್ವಹಣೆ, ಮಗುವಿನ ಜನನ ಮತ್ತು ಪ್ರಸವಾನಂತರದ ಆರೈಕೆಯ ಮೇಲೆ ವಿಶೇಷ ಒತ್ತು ನೀಡುತ್ತದೆ. ಕರ್ನಾಟಕದಲ್ಲಿ, ಈ ಕೋರ್ಸ್ ಅನ್ನು ಆಳ್ವಾಸ್, ಜಬ್ಬೆಟ್ಟಿ ಆಯುರ್ವೇದ ವೈದ್ಯಕೀಯ ಕಾಲೇಜು (ಬೀದರ್) ಮತ್ತು ಇತರ RGUHS-ಸಂಯೋಜಿತ ಕಾಲೇಜುಗಳು ನೀಡುತ್ತವೆ, ಆಯುರ್ವೇದ ಸ್ತ್ರೀರೋಗತಜ್ಞರಾಗಿ ಪರಿಣತಿ ಪಡೆಯಲು ಪ್ರವೇಶಕ್ಕಾಗಿ AIAPGET ಅಗತ್ಯವಿದೆ. ಎಂ-ಎಸ್ ಪ್ರಸೂತಿ ತಂತ್ರ ಮತ್ತು ಸ್ತ್ರೀ ರೋಗವು ಆಯುರ್ವೇದ ದೃಷ್ಟಿಕೋನದಿಂದ ಮಹಿಳೆಯರ ಆರೋಗ್ಯದಲ್ಲಿ (ಸ್ತ್ರೀರೋಗ ಶಾಸ್ತ್ರ/ಪ್ರಸೂತಿಶಾಸ್ತ್ರ) ಆಳವಾದ ವಿಶೇಷತೆಯನ್ನು ನೀಡುತ್ತದೆ, ಮುಟ್ಟಿನಿಂದ ಋತುಬಂಧ, ಗರ್ಭಧಾರಣೆ, ಹೆರಿಗೆ ಮತ್ತು ಪ್ರಸವಾನಂತರದವರೆಗೆ ಸಮಗ್ರ ಆರೈಕೆಯ ಮೇಲೆ ಕೇಂದ್ರೀಕರಿಸುತ್ತದೆ, ನಿರ್ಣಾಯಕ ಆರೋಗ್ಯ ಕ್ಷೇತ್ರದಲ್ಲಿ ಪೂರೈಸುವ ವೃತ್ತಿಜೀವನಕ್ಕಾಗಿ ಪ್ರಾಚೀನ ಬುದ್ಧಿವಂತಿಕೆಯನ್ನು ಆಧುನಿಕ ತಿಳುವಳಿಕೆಯೊಂದಿಗೆ ಸಂಯೋಜಿಸುತ್ತದೆ. ಪಿಸಿಓಡಿ, ಬಂಜೆತನ, ಅನಿಯಮಿತ ಚಕ್ರಗಳಂತಹ ಪರಿಸ್ಥಿತಿಗಳನ್ನು ನಿರ್ವಹಿಸಲು ಮತ್ತು ಸಂಯೋಜಿತ ಚಿಕಿತ್ಸೆಗಳನ್ನು ಬಳಸಿಕೊಂಡು ಆರೋಗ್ಯಕರ ತಾಯ್ತನವನ್ನು ಖಚಿತಪಡಿಸಿಕೊಳ್ಳಲು ಬಯಸುವ ಮಹಿಳೆಯರ ಯೋಗಕ್ಷೇಮದ ಬಗ್ಗೆ ಉತ್ಸುಕರಾಗಿರುವವರಿಗೆ ಇದು ಸೂಕ್ತವಾಗಿದೆ.ಎಲ್ಲಾ ಹಂತಗಳಲ್ಲಿ ಮಾನಸಿಕ ಮತ್ತು ದೈಹಿಕ ಯೋಗಕ್ಷೇಮದ ಮೇಲೆ ಕೇಂದ್ರೀಕರಿಸುವ ಮೂಲಕ ಮಹಿಳೆಯ ಸಂಪೂರ್ಣ ಜೀವನಚಕ್ರವನ್ನು ತಿಳಿಸುತ್ತದೆ.ಪ್ರಸೂತಿ ತಂತ್ರ (ಪ್ರಸೂತಿ) ಮತ್ತು ಸ್ತ್ರೀ ರೋಗ (ಸ್ತ್ರೀರೋಗ ಶಾಸ್ತ್ರ) ದಲ್ಲಿ ಆಳವಾದ ಜ್ಞಾನವನ್ನು ಬೆಳೆಸುತ್ತದೆ. ಸಮಗ್ರ ಚಿಕಿತ್ಸೆಗಾಗಿ ಸಾಂಪ್ರದಾಯಿಕ ಆಯುರ್ವೇದ ತತ್ವಗಳನ್ನು ಸಮಕಾಲೀನ ವೈದ್ಯಕೀಯ ಜ್ಞಾನದೊಂದಿಗೆ ಸಂಯೋಜಿಸುತ್ತದೆ. ಪಿಸಿಓಡಿ, ಬಂಜೆತನ, ಮುಟ್ಟಿನ ಅಸ್ವಸ್ಥತೆಗಳು ಮತ್ತು ಋತುಬಂಧದ ಲಕ್ಷಣಗಳಂತಹ ಸಾಮಾನ್ಯ ಮತ್ತು ಸಂಕೀರ್ಣ ಸಮಸ್ಯೆಗಳನ್ನು ಪರಿಹರಿಸುತ್ತದೆ. ಆರೋಗ್ಯಕರ ಸಂತತಿಯ ಮೇಲೆ ಕೇಂದ್ರೀಕರಿಸಿ: ಆರೋಗ್ಯಕರ ಶಿಶುಗಳನ್ನು ಸಾಧಿಸಲು ತಾಯಿಗೆ ಸಮಗ್ರ ಆರೈಕೆಯನ್ನು ಖಚಿತಪಡಿಸುತ್ತದೆ. ಎಂಎಸ್ ಪ್ರಸುತಿತಂತ್ರ ಮತ್ತು ಸ್ತ್ರೀ ರೋಗ್ ಅನ್ನು ಏಕೆ ಆರಿಸಬೇಕು? ಎಂಡಿ ಪ್ರಸುತಿತಂತ್ರ ಮತ್ತು ಸ್ತ್ರೀ ರೋಗ್ ವಿದ್ಯಾರ್ಥಿಗಳಿಗೆ ವ್ಯಾಪಕ ಜ್ಞಾನದೊಂದಿಗೆ ಬರುವ ಹಲವಾರು ಪ್ರಯೋಜನಗಳನ್ನು ನೀಡುತ್ತವೆ. ಎಂಡಿ ಪ್ರಸುತಿತಂತ್ರ ಮತ್ತು ಸ್ತ್ರೀ ರೋಗ್ ಅನ್ನು ಅನುಸರಿಸುವ ಕೆಲವು ಅನುಕೂಲಗಳು ಇಲ್ಲಿವೆ.ಈ ವೈದ್ಯಕೀಯ ಕ್ಷೇತ್ರವು ಕೌಶಲ್ಯಪೂರ್ಣ ಕಾರ್ಯಪಡೆಯ ವಿಷಯದಲ್ಲಿ ಅಪಾರ ಪೂರೈಕೆ-ಬೇಡಿಕೆ ಅಂತರವನ್ನು ಹೊಂದಿದೆ ಮತ್ತು ಆದ್ದರಿಂದ ಈ ಕ್ಷೇತ್ರದಲ್ಲಿ ವೃತ್ತಿಜೀವನವನ್ನು ಮಾಡಲು ಬಯಸುವವರಿಗೆ ಒಂದು ಅದ್ಭುತ ಅವಕಾಶವಾಗಿದ ಪ್ರಸುತಿ ಏವಂ ಸ್ತ್ರೀ ರೋಗ್‌ನಲ್ಲಿ ಸ್ನಾತಕೋತ್ತರ ಪದವಿಯನ್ನು ಪೂರ್ಣಗೊಳಿಸಿದ ನಂತರ ವ್ಯಕ್ತಿಗಳು ವಿಶೇಷತೆಯಲ್ಲಿ ವೈದ್ಯರಾಗಿ ಕೆಲಸ ಮಾಡಬಹುದು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಬಸವಸಾಗರ ಡ್ಯಾಮ್ ನಿಂದ ಭದ್ರಾವತಿಗೆ ನೂತನ ಬಸ್ ಪ್ರಾರಂಭ

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಡಿ.12 ತಾಲ್ಲೂಕಿನ ಬಸವಸಾಗರ ಡ್ಯಾಮ್ ಎಂದೇ ಖ್ಯಾತಿ ಪಡೆದಿದ್ದು, ಡ್ಯಾಮ್ ಸಮೀಪವಿರುವ ಹಿರೇಜಾವುರ ಕ್ರಾಸ್ ನಲ್ಲಿ ನೂತನವಾಗಿ, ಬಸವಸಾಗರ ಡ್ಯಾಮ್ ಮಾರ್ಗವಾಗಿ ಲಿಂಗಸಗೂರು, ಸಿಂಧನೂರು, ಗಂಗಾವತಿ, ಹೋಸಪೇಟೆ, ಹರಿಹರಿ, ಶಿವಮೊಗ್ಗ, ಭದ್ರಾವತಿ ಗೆ ನೂತನ ಮಾರ್ಗವನ್ನು ಪ್ರಾರಂಭ ಮಾಡಲಾಗಿದ್ದು ಈ ಭಾಗದ ಸುತ್ತಮುತ್ತಲಿನ ಪ್ರಯಾಣಿಕರು ಇದರ ಸದುಪಯೋಗವನ್ನು ಪಡೆದುಕೊಳ್ಳಿ ಎಂದು ಗ್ಯಾರಂಟಿ ಯೋಜನೆಗಳ ಸದಸ್ಯರಾದ ಗದ್ದೆನಗೌಡ ಪಾಟೀಲ್ ಹೇಳಿದರು.**

ತಾಲೂಕಿನ ಬಸವಸಾಗರ ಡ್ಯಾಮ್ ನಿಂದ (ಜಾವೂರ್ ಕ್ರಾಸ್) ಆರಂಭಿಸಲಾದ ಬಸವಸಾಗರ ದಿಂದ ಭದ್ರಾವತಿಗೆ ತೆರಳುವ ನೂತನ ಬಸ್ಸಿಗೆ ಗ್ರಾಮಸ್ಥರೊಂದಿಗೆ ಪೂಜೆ ಸಲ್ಲಿಸಿ ಮಾತನಾಡುತ್ತಾ ಉತ್ತರ ಕರ್ನಾಟಕ ರೈತರ ಜೀವ ನಾಡಿಯಾದ ಕೃಷ್ಣಾ ನದಿಯ ಅಡಿಯಲ್ಲಿ ಬರುವ ಬಸವಸಾಗರ ಡ್ಯಾಮ್ (ಆಣೆಕಟ್ಟು) ನ ಮುಂಭಾಗದಲ್ಲಿ ಈ ಹಿಂದಿನ ಮಾಜಿ ಶಾಸಕರಾದ ಡಿ ಎಸ್ ಹೂಲಗೇರಿ ಅವರ ಪರಿಶ್ರಮದಿಂದಾಗಿ ಜಗಜ್ಯೋತಿ ಬಸವೇಶ್ವರ ಕಂಚಿನ ಮೂರ್ತಿ ಸ್ಥಾಪನೆ ಮಾಡಲಾಗಿದ್ದು, ಈಗಾಗಲೇ ಬಸವಸಾಗರ ಡ್ಯಾಮ್ (ಆಣೆಕಟ್ಟು) ಎಂದು ಸರಕಾರವು ನಾಮಕರಣ ಮಾಡಲಾಗಿದ್ದು, ಇದು ಮೂರು ಜಿಲ್ಲೆಯ ವೃತ್ತವಾಗಿದ್ದು ಮುಂದಿನ ದಿನಗಳಲ್ಲಿ ಬಸವಸಾಗರ ಡ್ಯಾಮ್ (ಆಣೆಕಟ್ಟು) ಮುಂಭಾಗದಲ್ಲಿ ದೊಡ್ಡ ಪ್ರಮಾಣದ ಉದ್ಯಾನವನ ನಿರ್ಮಾಣ ಮಾಡಲು



ಸರಕಾರದ ಮಟ್ಟದಲ್ಲಿ ಚರ್ಚೆ ನಡದಿದೆ.

ಇಂದು ನೂತನ ಬಸ್ ಆರಂಭದಿಂದಾಗಿ ಸಿಂಧನೂರು ಗಂಗಾವತಿ ಹೊಸಪೇಟಿ ಹರಿಹರ ಶಿವಮೊಗ್ಗ ಭದ್ರಾವತಿಗಳಿಗೆ ತೆರಳುವ ಪ್ರಯಾಣಿಕರಿಗೆ ಹೆಚ್ಚಿನ ಅನುಕೂಲವಾಗಲಿದ್ದು ಅಲ್ಲದೆ ಈ ಭಾಗದ ಸಾರ್ವಜನಿಕರು, ಮಹಿಳೆಯರು, ವಿದ್ಯಾರ್ಥಿಗಳಿಗೆ, ಪ್ರವಾಸಿಗಳಿಗೆ ಅನುಕೂಲ ವಾಗುವ ಹಿನ್ನೆಲೆಯಿಂದ ಈ ಮಾರ್ಗವನ್ನು ಪ್ರಾರಂಭ ಮಾಡಲಾಗಿದೆ, ನೂತನವಾಗಿ ಆರಂಭಗೊಂಡ ಈ ಬಸ್ ಮುಂಜಾನೆ ಸಮಯ 8-30 ಕ್ಕೆ ಬಸವಸಾಗರ, ಆನೆಹೊಸೂರು ಲಿಂಗಸಗೂರು, ಸಿಂಧನೂರು, ಗಂಗಾವತಿ, ಹೋಸಪೇಟೆ, ಹರಿಹರಿ ಶಿವಮೊಗ್ಗ ಭದ್ರವತಿ ಗೆ ಬಸ್ ತಲುಪುತ್ತದೆ.

ಕೆಲವು ದಿನಗಳ ಹಿಂದೆ ಲಿಂಗಸಗೂರು ಪಟ್ಟಣಕ್ಕೆ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ನಿಗಮ ಅದ್ಯಕ್ಷರಾದ ಅರುಣ್ ಕುಮಾರ ಪಾಟೀಲ್ ರವರು ಆಗಮಿಸಿದಾಗ, ನಮ್ಮ ಬಸವಸಾಗರ ಆಣೆಕಟ್ಟು ಇದೆ ಸರಿಯಾದ ಹೆಸರು ಬಳಿಕೆಯಾಗುತ್ತಿಲ್ಲ ಎಂದು ಅವರು ಗಮನಕ್ಕೆ ತರಲಾಗಿತ್ತು, ದಿನನಿತ್ಯ ಸಾರ್ವಜನಿಕರು ವಿದ್ಯಾರ್ಥಿಗಳು, ಹೆಚ್ಚಿನ ಪ್ರಮಾಣದಲ್ಲಿ ಪ್ರಯಾಣ ಮಾಡುತ್ತಿದ್ದಾರೆ, ಈ ಮಾರ್ಗವನ್ನು ಪ್ರಾರಂಭ ಮಾಡಲು ಮನವಿ ಮಾಡಲಾಗಿತ್ತು ಅದಕ್ಕೆ ಸ್ಪಂದಿಸಿ ಸಾರಿಗೆ ಅಧಿಕಾರಿಗಳಿಗೆ ಬಸ್ ಮಾರ್ಗವನ್ನು ಪ್ರಾರಂಭ ಮಾಡಲು ಸೂಚಿಸಿದರು, ಬಸವಸಾಗರ ಡ್ಯಾಮ್ ( ಆಣೆಕಟ್ಟು ) ರೈತರ ಜೀವನಾಡಿಯಾಗಿದ್ದು ದಿನನಿತ್ಯ ಡ್ಯಾಮ್ ( ಆಣೆಕಟ್ಟು ) ನೋಡಲು ಪ್ರವಾಸಿಗರು ಆಗಮಿಸುತ್ತಿದ್ದಾರೆ.

ಸಿಂಧನೂರು ಹಾಗೂ ಹೋಸಪೇಟೆ, ಸುಕ್ಷೇತ್ರ ಹುಲಿಗೇಮ್ಮ ದೇವಸ್ಥಾನ ಕ್ಕೆ ಹೋಗಲು ತೊಂದರೆ ಯಾಗುತ್ತಿತ್ತು, ಈ ಮಾರ್ಗವು ಅನುಕೂಲವಾಗಲಿದೆ ರಾಜ್ಯ ಸರಕಾರದ ಶಕ್ತಿ ಯೋಜನೆಯ ಸೌಲಭ್ಯದಡಿಯಲ್ಲಿ ಮಹಿಳೆಯರು ಉಚಿತ ಬಸ್ ಪ್ರಯಾಣ ಮಾಡುತ್ತಿದ್ದಾರೆ, ರಾಜ್ಯದಲ್ಲಿ ಶಕ್ತಿ ಯೋಜನೆ ಯಶಸ್ವಿಯಾಗಿ ಈಗಾಗಲೇ 2,5 ವರ್ಷ ಪೂರೈಸಿದೆ,ಈ ಭಾಗವು ನೀರಾವರಿ ಪ್ರದೇಶವಾಗಿರುವುದರಿಂದ ನಿರಂತರವಾಗಿ ಸಿಂಧನೂರು ಹೋಗುವ ಜನರು ಹೆಚ್ಚಾಗಿ ಪ್ರಯಾಣ ಮಾಡುತ್ತಿದ್ದಾರೆ, ವಿದ್ಯಾರ್ಥಿಗಳು ಕಾಲೇಜಗೆ ತೆರಳಲು ಅನುಕೂಲ ವಾಗಿದ್ದು, ಬಸವಸಾಗರ ಡ್ಯಾಮ್ ( ಆಣೆಕಟ್ಟು ) ಹೆಸರು ಉಳಿಸುವ ನಮ್ಮೆಲ್ಲರ ಜವಾಬ್ದಾರಿಯಾಗಿದೆ , ಹೊಸ ಮಾರ್ಗದ ಜನರಿಗೆ ಜಾಗೃತಿ ಮಾಡಿಸಬೇಕು ಎಂದು ತಿಳಿಸಿದರು ಕಲ್ಯಾಣ ಕರ್ನಾಟಕ ಸಾರಿಗೆ ಸಂಸ್ಥೆ (ನಿ) ಜಿಲ್ಲಾಧಿಕಾರಿ ಚಂದ್ರಶೇಖರ್ ರವರಿಗೆ ಹಾಗೂ ಲಿಂಗಸಗೂರು ಘಟಕ ವ್ಯವಸ್ಥಾಪಕ ಪ್ರಕಾಶ ದೊಡ್ಡಮನಿ ರವರಿಗೆ ಮಾರ್ಗ ಪ್ರಾರಂಭ ಮಾಡಿದಕ್ಕೆ ಅಭಿನಂದನೆಗಳು ಸಲ್ಲಿಸುತ್ತೆವೆ ಎಂದು ಅವರು ಹೇಳಿದರು. ಈ ಸಂದರ್ಭದಲ್ಲಿ, ಜಿಲ್ಲಾ ಪಂಚಾಯತಿ ಮಾಜಿ ಸದಸ್ಯರಾದ ಗೌಡಪ್ಪ ಕಂಬಳಿ, ಲಿಂಗಸಗೂರು ತಾಲ್ಲೂಕ ಪಂಚಾಯತ ಕೆಡಿಪಿ ಸದಸ್ಯರಾದ ಶರಣಪ್ಪ ಕಟಗಿ, ಲಿಂಗಸಗೂರು ಬ್ಲಾಕ್ ಕಾಂಗ್ರೆಸ್ ಸಮಿತಿ ಪದವೀಧರ ವಿಭಾಗ ಅದ್ಯಕ್ಷರಾದ ಪೂಲಪ್ಪ ಪವಾರ, ರೋಡಲಬಂಡಾ ಯುಕೆಪಿ ಗ್ರಾಮ ಪಂಚಾಯತಿ ಉಪಾಧ್ಯಕ್ಷ ನಾಗರಾಜ ರಬ್ಬರ್, ಸಾರಿಗೆ ಇಲಾಖೆಯ ನಿರ್ವಾಹಕ ಮಾಹಾಂತೇಶ ಚಿತ್ರನಾಳ, ಚಾಲಕ ಬಸವರಾಜ ಬೆಂಡೋಣಿ,ಮುಖಂಡರಾದ ಯಾಕೂಬ ಸಾಬ್, ಗಂಗಾಧರ ಮೇಟಿ, ರಾಮಣ್ಣ ವಂದಲಿ, ದಾವಲಸಾಬ ಹುಡೇದ, ಹುಸೇನಬಾಷ, ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು, ಗ್ರಾಮದ ಮುಖಂಡರು, ಹಲವಾರು ಮಹಿಳೆಯರು ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ಶಾರದಾದೇವಿಯವರ ಜಯಂತಿ & ಆಶ್ರಮದ 5ನೇ ವಾರ್ಷಿಕೋತ್ಸವ ಕಾರ್ಯಕ್ರಮ




ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಸಿಂಧನೂರಿನ ರಾಮಕೃಷ್ಣ ವಿವೇಕಾನಂದ ಆಶ್ರಮ ಬಪ್ಪೂರು ರಸ್ತೆ, ಸಿಂಧನೂರು- ಶ್ರೀಮಾತೆ ಶಾರದಾದೇವಿಯವರ ಜಯಂತಿ & ಆಶ್ರಮದ 5ನೇ ವಾರ್ಷಿಕೋತ್ಸವ ಕಾರ್ಯಕ್ರಮ.**

ಆಶ್ರಮದಲ್ಲಿ ನಡೆದ ಶ್ರೀಮಾತೆ ಶಾರದಾದೇವಿಯವರ 173 ನೇ ಜಯಂತಿ & ಆಶ್ರಮದ 5 ನೇ ವಾರ್ಷಿಕೋತ್ಸವದ ಸಂಜೆಯ ವೇದಿಕೆ ಕಾರ್ಯಕ್ರಮ ಅರ್ಥಪೂರ್ಣವಾಗಿ ನೆರವೇರಿತು. ಕಾರ್ಯಕ್ರಮದ ವಿಶೇಷ ಆಹ್ವಾನಿತರಾದ ಶ್ರೀ ಚಂದ್ರಶೇಖರ ಮೈಲಾರ, ನಗರಸಭೆ ಸದಸ್ಯರು ಸಿಂಧನೂರು ಇವರು ಪುಷ್ಪಾರ್ಚನೆ ಮಾಡುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಶ್ರೀ ಶಾರದಾ ಮಾತೆಯವರ ಕುರಿತು ಮಾತನಾಡಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಶ್ರೀ ಹೇಮಲತಾ ಜೋಳದರಾಶಿ, ವಕೀಲರು ಸಿಂಧನೂರು ಇವರು ಆಶ್ರಮದ 5ನೇ ವಾರ್ಷಿಕೋತ್ಸವದ ಸಾರ್ಥಕ ಸೇವೆಯ ಕುರಿತು ಮಾತನಾಡಿದರು. ಕಾರ್ಯಕ್ರಮದ ಉಪನ್ಯಾಸಕರಾದ ಶ್ರೀ ಕಲ್ಯಾಣ ಮಂಡಲ, ಶ್ರೀ ರಾಮಕೃಷ್ಣ ಪಳ್ಳಿ ಸಿಂಧನೂರು ಇವರು ಶ್ರೀಮಾತೆ ಶರದಾದೇವಿಯವರ ಜೀವನ ವಿಷಯದ ಕುರಿತು ಬೆಂಗಾಳಿಯಲ್ಲಿ ಉಪನ್ಯಾಸ ನೀಡಿದರು. ಕಾರ್ಯಕ್ರಮದ ಮತ್ತೊರ್ವ ಉಪನ್ಯಾಸಕರಾದ ಶ್ರೀಮತಿ ಅಶ್ವಿನಿ ಹಿರೇಮಠ, ಶಿಕ್ಷಕರು, ಕೇಂದ್ರೀಯ ವಿದ್ಯಾಲಯ ಸಿಂಧನೂರು ಇವರು ಶ್ರೀಮಾತೆ ಶಾರದಾದೇವಿಯವರ ಜೀವನದ ಘಟನಾವಳಿಗಳ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದ ಉಪನ್ಯಾಸಕರಾದ ಶ್ರೀಮತಿ ನೀಲಮ್ಮ ಸಂಗಮೇಶ ಅಲಬನೂರ ಇವರು ಶ್ರೀಮಾತೆಯವರ ಸಂದೇಶ ವಿಷಯದ ಕುರಿತು ಹಿಂದಿ & ಕನ್ನಡದಲ್ಲಿ ಉಪನ್ಯಾಸ ನೀಡಿದರು. ಕಾರ್ಯಕ್ರಮದ ದಿವ್ಯ ಸಾನಿಧ್ಯ & ಅಧ್ಯಕ್ಷತೆಯನ್ನು ವಹಿಸಿದ್ದ ಆಶ್ರಮದ ಅಧ್ಯಕ್ಷರಾದ ಪೂಜ್ಯ ಶ್ರೀ ಸ್ವಾಮಿ ಸದಾನಂದ ಮಹಾರಾಜ್ ರವರು ಶ್ರೀ ಮಾತೆ ಶಾರದಾದೇವಿಯವರ ಸಂದೇಶಗಳ ಕುರಿತು ಮಾತನಾಡಿದರು. ಆಶ್ರಮದ 5 ವರ್ಷಗಳ ಸಾರ್ಥಕ ಸೇವೆಯ ಕುರಿತು ಎಲ್ಲರೂ ಹರ್ಷ ವ್ಯಕ್ತಪಡಿಸಿದರು.

## ಕರಡಕಲ್ ಶ್ರೀಗಳಿಗೆ ಮುಖಂಡ ಬಸನಗೌಡರಿಂದ ಗೌರವ ಸಮರ್ಪಣೆ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ತಾಲೂಕಿನ ಬ.ಸಾಲವಾಡಗಿ ಗ್ರಾಮದ ಪ್ರಭಾವಿ ರಾಜಕೀಯ ಮುಖಂಡರು ಹಾಗೂ ಸಮಾಜ ಸೇವಕರಾದ ಬಸನಗೌಡ ಪಾಟೀಲ ಯಡಿಯಾಪೂರ ಅವರು ಕರಡಕಲ್ಲ ಕೋರಿ ಸಿದ್ದೇಶ್ವರ ಶಾಖಾ ಮಠದ ಪರಮ ಪೂಜ್ಯರಾದ ಶಾಂತ ರುದ್ರಮುನಿ ಮಹಾಸ್ವಾಮಿಗಳಿಗೆ ಗೌರವ ಸಮರ್ಪಣೆ ಸಲ್ಲಿಸಿದರು. ಶುಕ್ರವಾರ ಶ್ರೀ ಮಠಕ್ಕೆ ಭೇಟಿ ನೀಡಿದ ಅವರು ಶ್ರೀಗಳಿಗೆ ಗೌರವ ಸಮರ್ಪಣೆಯನ್ನು ಸಲ್ಲಿಸಿ ಅವರಿಂದ ಆಶೀರ್ವಾದ ಪಡೆದುಕೊಂಡರು.**




ಈ ಸಂದರ್ಭದಲ್ಲಿ ಶ್ರೀಗಳು ಸಮಾಜ ಸೇವಕ ಬಸನಗೌಡ ಪಾಟೀಲ ಯಡಿಯಾಪುರ ಅವರ ಸಮಾಜಮುಖಿ ಕಾರ್ಯಗಳಿಗೆ ಮೆಚ್ಚುಗೆ ಸೂಚಿಸಿ ಇನ್ನೂ ಹೆಚ್ಚಿನ ಸೇವೆಯನ್ನು ಮಾಡಿ ಎಂದು ಆಶೀರ್ವಾದ ನೀಡಿದರು. ಈ ಸಮಯದಲ್ಲಿ ಮುಖಂಡ ವಿಶ್ವನಾಥಗೌಡ ಪಾಟೀಲ (ಲಕ್ಕುಂಡಿ) ಹಾಗೂ ರೆಡ್ಡಿ ನಾಯ್ಕಲ್ ಉಪಸ್ಥಿತರಿದ್ದರು.

# ಆರ್. ಆರ್. ಆಸ್ಪತ್ರೆಯಿಂದ ಉಚಿತ ತಪಾಸಣಾ ಶಿಬಿರ

ನೈಜ್ಯ ದೆಸೆ ನ್ಯೂಸ್

**ಅರಕೇರ: ಡಿ 12 ಅರಕೇರ ತಾಲೂಕಿನ ಗಲಗ್ ಗ್ರಾಮದಲ್ಲಿ ಆರ್. ಆರ್. ಆಸ್ಪತ್ರೆಯು ಸಾರ್ವಜನಿಕರ ಅನುಕೂಲಕ್ಕಾಗಿ ಬೃಹತ್ ಉಚಿತ ತಪಾಸಣಾ ಶಿಬಿರವನ್ನು ಆಯೋಜಿಸಲಾಯಿತು.**




ಶಿಬಿರದಲ್ಲಿ ಪ್ರಮುಖ ವೈದ್ಯರಾದ ಡಾ. ಎಂ. ವಿ. ಪಾಟೀಲ್ ಈ ಶಿಬಿರದಲ್ಲಿ ಮಧುಮೇಹ (ಸಕ್ಕರೆ ಕಾಯಿಲೆ), ಅಧಿಕ ರಕ್ತದೊತ್ತಡ (ಬಿ.ಪಿ), ಥೈರಾಯ್ಡ್ ಸಮಸ್ಯೆಗಳು, ಮತ್ತು ಹೃದಯ ರೋಗಗಳಂತಹ ದೀರ್ಘಕಾಲದ ಕಾಯಿಲೆಗಳಿಗೆ ಉಚಿತ ತಪಾಸಣೆ ಮತ್ತು ಸಲಹೆಯನ್ನು ನೀಡಲಾಯಿತು ಸಾಮಾನ್ಯ ಆರೋಗ್ಯ ಸಮಸ್ಯೆಗಳಾದ ನೆಗಡಿ, ಕೆಮ್ಮು, ಜ್ವರ, ತಲೆನೋವು, ಹಾಗೂ ಎಲುಬು-ಕೀಲು ನೋವುಗಳಿಗೆ ಸಹ ತಪಾಸಣೆಯ ಸೌಲಭ್ಯ ವಿತ್ತು ಇದಲ್ಲದೆ.

ಮೂತ್ರಪಿಂಡ ಸಂಬಂಧಿಸೀದಾ ಸಮಸ್ಯೆಗಳು, ಮೂಲವ್ಯಾದಿ ಅಪಘಾತದ ಗಾಯಗಳು ಮತ್ತು ಮಧುಮೇಹ ಹೃದಯಕ್ಕೆ ಸಂಬಂಧಿಸಿದ ಇನ್ನು ಅನೇಕ ಕಾಯಿಲೆಗಳಿಗೆ ಸಂಬಂಧಿಸಿದಂತೆ ಸುಮಾರು 130 ಕ್ಕೂ ಹೆಚ್ಚು ಜನರು ಇದರ ಸದುಪಯೋಗ ಪಡೆದುಕೊಂಡಿದ್ದಾರೆ ಎಂದು ತಿಳಿದು ಬಂದಿತ್ತು ಈ ಸಂದರ್ಭದಲ್ಲಿ ಆಸ್ಪತ್ರೆಯ ಮುಖ್ಯಸ್ಥರಾದ ಡಾಕ್ಟರ್ ಮಲ್ಲನಗೌಡ ವಿ ಪಾಟೀಲ್ ಹಾಗೂ ಸಿಬ್ಬಂದಿ ವರ್ಗದವರಾದ ಅಭಿಷೇಕ್ ಮತ್ತು ಅರುಣ್ ಹಾಗೂ ತಾಯಮ್ಮ ಇವರು ಉಚಿತ ತಪಾಸಣಾ ಶಿಬಿರದಲ್ಲಿ ಭಾಗಿಯಾಗಿದ್ದರು.

# ಗವಿಸಿದ್ಧೇಶ್ವರ ಮಠದ ಜಾತ್ರೆ: ಅಗತ್ಯ ಸಿದ್ಧತೆಗೆ ಜಿಲ್ಲಾಧಿಕಾರಿ ಸೂಚನೆ

ನೈಜ್ಯ ದೆಸೆ ನ್ಯೂಸ್

**ಕೊಪ್ಪಳ: ಜಿಲ್ಲಾಕೇಂದ್ರದಲ್ಲಿರುವ ಗವಿಸಿದ್ಧೇಶ್ವರ ಮಠದ ಜಾತ್ರೆ ಜ.5ರಿಂದ ಮೂರು ದಿನಗಳ ಕಾಲ ನಡೆಯಲಿದ್ದು, ಜಿಲ್ಲಾಡಳಿತದ ವತಿಯಿಂದಲೂ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು' ಎಂದು ಜಿಲ್ಲಾಧಿಕಾರಿ ಡಾ.ಸುರೇಶ ಬಿ. ಇಟ್ನಾಳ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಜಾತ್ರೆಯ ಸಿದ್ಧತೆಗಳನ್ನು ಕುರಿತು ಚರ್ಚಿಸಲು ಜಿಲ್ಲಾಡಳಿತ ಭವನದಲ್ಲಿ ಗುರುವಾರ ವಿವಿಧ ಇಲಾಖೆಗಳ ಅಧಿಕಾರಿಗಳ ಜೊತೆ ಪೂರ್ವಭಾವಿ ಸಭೆ ನಡೆಸಿದ ಅವರು 'ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ಹಾಗೂ ವ್ಯವಸ್ಥಿತವಾಗಿ ನಡೆಸಲು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಅಗತ್ಯ ಸಿದ್ದತೆಗಳನ್ನು ಮಾಡಿಕೊಳ್ಳಬೇಕು.**

ದಕ್ಷಿಣ ಭಾರತದ ಕುಂಭಮೇಳ ಎಂದೇ ಪ್ರಸಿದ್ಧವಾದ ಜಾತ್ರೆಗೆ ರಾಜ್ಯದ ವಿವಿಧ ಭಾಗಗಳಿಂದ ಲಕ್ಷಾಂತರ ಭಕ್ತರು ಬರುವ ನಿರೀಕ್ಷೆಯಿದೆ' ಎಂದು ತಿಳಿಸಿದರು.



'ಜನರಿಗೆ ಕುಡಿಯುವ ನೀರು, ವಾಹನಗಳ ನಿಲುಗಡೆಗೆ ವ್ಯವಸ್ಥೆ, ವಿದ್ಯುತ್ ವ್ಯವಸ್ಥೆ ಒದಗಿಸಬೇಕು. ಜಾತ್ರೆಯು ಶಾಂತಿಯುತವಾಗಿ ಹಾಗೂ ವ್ಯವಸ್ಥಿತವಾಗಿ ಜರುಗುವಂತೆ ಜಿಲ್ಲಾಡಳಿತದಿಂದ ಸಕಲ ರೀತಿಯ ಸಹಕಾರ ನೀಡಲಾಗುವುದು. ಈ ಹಿನ್ನೆಲೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಒಳಗೊಂಡು ಸಮಿತಿ ರಚಿಸಿ ಜವಾಬ್ದಾರಿ ಹಂಚಿಕೆ ಮಾಡಲಾಗುವುದು' ಎಂದು ಹೇಳಿದರು. 'ಭಕ್ತರ ಸುರಕ್ಷತೆಗಾಗಿ ಸೂಕ್ತ ಪೊಲೀಸ್ ಭದ್ರತೆ ಜೊತೆಗೆ ಸಿಸಿಟಿವಿ ಕ್ಯಾಮೆರಾ ಅಳವಡಿಕೆಗೆ ಕ್ರಮ ವಹಿಸಬೇಕು.

ಮಠದ ಆವರಣದಲ್ಲಿ ಆಂಬುಲೆನ್ಸ್ ಮತ್ತು ಅಗ್ನಿಶಾಮಕ ದಳದ ವಾಹನಗಳನ್ನು ಕಾಯ್ದಿರಿಸಬೇಕು. ತುರ್ತು ಸಂದರ್ಭದಲ್ಲಿ ಅಂಬುಲೆನ್ಸ್ ಸಂಚರಿಸಲು ಅನುಕೂಲವಾಗುವಂತೆ ಬ್ಯಾರಿಕೇಡ್ ವ್ಯವಸ್ಥೆ ಮಾಡಬೇಕು. ನಿರಂತರ ದಾಸೋಹ ಮತ್ತು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ನಗರಸಭೆಯ ಅಧಿಕಾರಿಗಳು ಸ್ವಚ್ಛತೆಗೆ ಹೆಚ್ಚಿನ ಪೌರ ಕಾರ್ಮಿಕರ ನಿಯೋಜನೆ, ಕುಡಿಯುವ ನೀರಿನ ಸೌಕರ್ಯಕ್ಕೆ ಈಗಿನಿಂದಲೇ ಸಿದ್ಧತೆ ಮಾಡಿಕೊಳ್ಳಬೇಕು' ಎಂದು ಸೂಚನೆ ನೀಡಿದರು. ಸಭೆಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ ನಿರ್ಮಲಾ, ಹೆಚ್ಚುವರಿ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಸಹಾಯಕ ಆಯುಕ್ತ ಮಹೇಶ್ ಮಾಲಗಿತ್ತಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಂಜುನಾಥ ಗುಂಡೂರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಟಿ.ಲಿಂಗರಾಜು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ಸೋಮಶೇಖರಗೌಡ ಪಾಟೀಲ್, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶ ಜಗದೀಶ, ಕೊಪ್ಪಳ ತಹಶೀಲ್ದಾರ್ ವಿಠ್ಠಲ್ ಚೌಗುಲಾ, ನಗರಸಭೆ ಪೌರಾಯುಕ್ತ ವೆಂಕಟೇಶ ನಾಗನೂರು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಪಾಲ್ಗೊಂಡಿದ್ದರು.

ವರ್ಣಿತ್ ನೇಗಿ ಜಿಲ್ಲಾ ಪಂಚಾಯಿತಿ ಸಿಇಒಮಹಾದಾಸೋಹಕ್ಕೆ ಶುದ್ಧ ಕುಡಿಯುವ ನೀರು ಆಹಾರ ಸುರಕ್ಷಾ ಅಧಿಕಾರಿಗಳು ಗವಿಮಠದ ಅಡುಗೆ ಸಿಬ್ಬಂದಿ ಜೊತೆ ವಿಶೇಷ ಸಭೆ ನಡೆಸಿ ಸುರಕ್ಷಾ ಕ್ರಮಗಳನ್ನು ತೆಗೆದುಕೊಳ್ಳಬೇಕು. ದೂಳು ಬಾರದಂತೆ ನಿಗಾ ವಹಿಸಬೇಕು. ಕೊಪ್ಪಳ: 'ಗವಿಸಿದ್ದೇಶ್ವರ ಮಠದ ಜಾತ್ರಾ ಮಹೋತ್ಸವವು ಬಹುದೊಡ್ಡ ಪ್ರಮಾಣದಲ್ಲಿ ನಡೆಯುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ನಿಯೋಜಿಸಲಾಗುವುದು. ಪ್ರಮುಖ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗುವುದು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್. ಎಲ್ ಅರಸಿದ್ದಿ ತಿಳಿಸಿದರು. 'ಸಂಚಾರ ದಟ್ಟಣೆ ಸಮಸ್ಯೆಯಾಗದಂತೆ ವಾಹನಗಳ ನಿಲುಗಡೆಗೆ ವ್ಯವಸ್ಥೆ ಮಾಡಿ ಅದರ ಮಾಹಿತಿಯನ್ನು ಮುಂಚಿತವಾಗಿ ಮಾಧ್ಯಮಗಳ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗುವುದು' ಎಂದು ಹೇಳಿದರು.ಪ್ರಮುಖ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮೆರಾ